(iii) Notification No. RDN 12 TRM 77 (E) dated 30th June 1977.

Remission of land revenue in certain villages of Turuvekere Taluk for the year 1976-77.
under sub section 2 of section 194 of the Karnataka Land Revenue Act 1964,

SRI K H. RANGANATH.—I beg to lay.

Notification No. GSR 123 dated 13th April 1977 The Karnataka Weights and Measures (Enforcement) (Amendment) Rules 1977.

under section 43 of the Karnataka Weights and Measures (Enforcement) Act 1958

MADAM SPEAKER.—All the notifications are laid.

Karnataka State Servants (Determination of Age) (Amendment) Bill, 1977.

Introduction of Bill;

SRI D. DEVARAJ URS (Chief Minister) I move..—

"That leave be granted to introduce the Karnataka State Servants (Determination of Age) (Amendment) Bill, 1977".

MADAM SPEAKER.—The question is.

"That leave be granted to introduce the Karnataka State Servants (Determination of Age) (Amendment) Bill, 1977".

The motion was adopted.

SRI D. DEVARAJ URS.—I beg to introduce the Karnataka State Servants (Determination of Age) (Amendment) Bill, 1977.

MADAM SPEAKER.—The Bill is introduced. **

Enquiry *re* noties sent by Members.

ಶ್ರೀ ಜೆ ಎಲ್. ಕಬಾಡಿ.—ನಾನು ತಮಗೆ ಒಂದು ವಿಷಯವನ್ನು ತಿಳಿಸಬೇಕಾಗಿದೆ. ನಮ್ಮ ಕ್ಷೇತ್ರದ ಒಂದು ಮೈನರ್ ಇರಿಗೇಷನ್ ಕೆಲಸ ಮಂಜೂರಾದಂದು ಹೋದ ಸಾರಿಯ ಬಡ್ಜೆಟ್‌ನಲ್ಲಿ ಇನ್‌ಕ್ಲೂಡ್ ಆಗಿದೆ, ಆದರೆ ಅದು ಈ ಸಾರಿ ಬಡ್ಜೆಟ್ಟ್‌ನಲ್ಲಿ ಇನ್‌ಕ್ಲೂಡ್ ಆಗದೇ ಇರುವುದಕ್ಕೆ ಕಾರಣವೇನು?

SRI H.C. SRIKANTIAH.—This work was administratively sanctioned last year it was in the Budget. This year it is missing. I have taken action to include it and the work will be taken up.

** Bill Appended as Annexure to this volume

SRI. C. BYRE GOWDA.—Taking some notices from members ಸೆಕ್ಷನ್ ೩೧೨ರ ಪ್ರಕಾರ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಂತೆ ನಮ್ಮ ದೇವನಹಳ್ಳಿ ತಾಲ್ಲೂಕಿನಲ್ಲಿ.

ಅಧ್ಯಕ್ಷರು.—ಅದನ್ನು ನಾಳೆ ಹೇಳಿ. ಇವತ್ತಿನ ಡಿಮ್ಯಾಂಡ್‌ಗೆ ಉತ್ತರ ಮುಖ್ಯವಲ್ಲವೇ?

ಶ್ರೀ ಸಿ. ಬೈರೇಗೌಡ.—ನಾಳೆ ಅಧಿವೇಶನ ಕೊನೆಯಂತೆ.

ಅಧ್ಯಕ್ಷರು.—ನಾಳೆ ಕೊನೆಯೆಂದು ಯಾರು ನಿಮಗೆ ಹೇಳಿದರು.

ಶ್ರೀ ಕೋಣದೂರು ಲಿಂಗಪ್ಪ.—ಬಹು ತುರ್ತು ವಿಷಯ. ಶಿವಮೊಗ್ಗದಲ್ಲಿ ಗಜಾನನ ಕಂಪನಿ ಬಸ್ ನೌಕರವರ್ಗದವರು ೨ನೇ ಜುಲೈ ೧೯೭೭ ರಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಅದರ ಮಾಲೀಕರು ಅವರನ್ನು ಕೆಲಸದಿಂದ ತೆಗೆಯಲಾಗುತ್ತದೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ತಮಗೆ ನಿನ್ನೆ ನೋಟೀಸ್ ಕಳುಹಿಸಿದ್ದೇನೆ.

ಅಧ್ಯಕ್ಷರು.—ನಿನ್ನೆ ಕಳುಹಿಸಿದ್ದು ಇವತ್ತು ಹೇಗೆ ಬರುತ್ತದೆ ?

ಶ್ರೀ ಎಚ್.ಡಿ. ದೇವೇಗೌಡ.— ಜಿ.ಎಲ್.ಬಿ.ಸಿ. ನಲ್ಲಿ ಸಾಕಷ್ಟು ನೀರಿಲ್ಲದೆ ಬೆಳೆ ಒಣಗಿಹೋಗುತ್ತಿದೆಯೆಂದು ಅಲ್ಲಿನ ೫೦-೬೦ ಜನರು ಸತ್ಯಾಗ್ರಹ ಮಾಡಲು ಹೊರಟಿದ್ದಾರೆ. ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆಯೆಂಬುದನ್ನು ತಿಳಿಸುವುದಕ್ಕೆ ಆಗುತ್ತದೆಯೋ?

ಶ್ರೀ ಡಿ. ದೇವರಾಜ ಅರಸ್.—ಅದರ ಬಗ್ಗೆ ಸಂಬಂಧಪಟ್ಟ ಫೈಲನ್ನು ತರಿಸುವುದಕ್ಕೆ ಹೇಳಿದ್ದೇನೆ. ಅದು ಬಂದ ಕೂಡಲೇ ಹೇಳುತ್ತೇನೆ.

Budget Estimates for 1977-78

Demands for grants

Demand No. 1, 37 and 38 (Debate Continued)

† SRI K. PUTTASWAMY (Chamundeswari).—Madam Speaker, I would not like to dwell at length on the point that I am going to raise because of the serious limitation of time.

The House remembers that in the year 1965 an amendment to the Karnataka Agriculture Produce Marketing Act was rushed through, amending section 65 chiefly. Under that amended section "the marketing committee shall collect and levy free from other seller in respect of agricultural produce sold by such seller in the market area at the rate of Re. 1 per Rs. 100 of the price of such produce sold." In the definition the producer is defined. He is an agriculturist. This Act was chiefly passed for giving protection to the agriculturist. But after several amendments what has happened is, the producer is no where in the picture. The seller may be producer or may not be a producer. Now on every agricultural produce sold any where, not necessarily in the market yard but in any market, this 1% is leviable on the seller of the agricultural produce and also similarly on the buyer also a fee of not more than Rs. 1 per Rs. 100 worth of agricultural produce is leviable. There is distinction made in the Act between seller and buyer. A seller may be a *producer*. I have already submitted to you that though the Act was meant to protect

the agricultural producer there is no protection for him at all. This Act was passed chiefly to prevent exploitation but it has resulted in organised exploitation of the agriculturists.

1-00 P.M.

Madam Speaker, we know that under Section 65 this fee is leviable in the entire market area. The State is divided into several market areas; there is no area which is not covered by market area. Therefore, wherever the agricultural produce is sold it attracts this tax. Even if it is sold in a farm house or a village this tax is payable. I have contended all through, even at the time when this amendment was introduced, that this is not a legal fee, and that it should not be rushed through. It so happened at the eleventh hour instructions were given by the Leader of the House to the Members of the Ruling Party and this legislation was passed. What has been its effect? Even now as we know that there are certain central markets from the areas, conversant to you and me—Mysore is a Central market for Chamarajanagar, Kollegal, Nanjangud. Krishnarajanagar and Srirangapatna. Unfortunately, the agricultural producers always tend to move to Mysore City. So, when the agricultural produce is in transit, at every point this fee is being collected. Every grain that is grown in Srirangapatna is taken to Mysore City for sale. As we go to Mysore we see at the Southern gate of Srirangapatna there is a check-post which is located by the Market Committee and there they collect 2 per cent fee: fee payable by the seller 1 per cent and fee payable by the buyer 1 per cent. When the agricultural commodity goes to Mysore City, another 2 per cent is collected. Even from Gundlupet if agricultural commodities come to Mysore Fee is collected both at gundlupet and at the Mysore Market. Similarly fee is collected on agricultural commodities coming from Krishnarajanagar, Nanjangud and so on. This fee is collected at two, three and even four places. I have been urging upon the Government to kindly consider remedy. But, they have not chosen to do it. I contend that the entire Section 65 is ultra-vires of the powers of the Assembly. This cannot be in the shape in which it is done. If they resort to taxation, they could do it, but they cannot levy it as fee. I would like to read the legal advice that was tendered to the Government at the time when this amendment came, and they have brushed aside the legal advise. Though I have written about a year back about this, I have not heard anything from the Government. My point will become very clear if I read through this legal advice: If the restrictions are reasonable, the establishment of a market is justified, on account of the protection afforded. The legal advice is I quote;

"Establishment of markets is a restriction on trade. This to be valid should pass the test of reasonableness. The Courts have upheld the law on the ground it is regulatory only and that the object being protection of the grower against exploitation from middlemen, the restriction is reasonable.—It must be reasonable

Regarding the feepayable, the initial fixation on the buyer was held to be justified because of the facility of an orderly market made available. There was *quid pro quo*

Regarding the fee enhanced payable I have been contending that the fee is very much on the high side. In 1956, when I piloted this Bill, the maximum fee was 30 paise per Rs. 100, and now it is Rs. 2.

For any fee the test of *quid pro quo* should be satisfied.

The sum charged should bear relation and proportion to the service or facility given.

The amending Section 65 (3) says that every Market Committee shall not withstanding anything contained in this Act credit to the Karnataka Roads and Bridges Fund constituted under the Motor Vehicles Taxation Act the market fee collected under sub-section (1) for being spent for the purpose of construction, repair and improvement of maintenance of rural roads. With this object in view, the member of the Government, the then Minister for Public Works, who moved this Bill contended that this fee is justifiable on the ground that the entire utilisation is going to be spent for rural roads. For this, the legal advice is against. I quote.

"Now regarding the proposed fee on the seller also, the same test should be satisfied if it is to be valid as a fee. That is, there must be some service provided in return — when the buyer pays for the service or facility already the expenditure thereon is met. It may be difficult to maintain that the seller gets additional facility.

It is said that the extra fee is for the Roads to be laid and kept and the seller gets this facility for the payment he makes. The *quid pro quo* should be relatable to the immediate rather than the remote. Roads are laid not exclusively for the seller's benefit. Others also use it and subjecting the seller to the levy may not be reasonable. At any rate that is a remote facility.

The proposed levy of fee, therefore, may not be justified.

Whether it may be treated as a tax needs to be considered for a tax, justification of *quid pro quo* is not necessary. It is an impost. But any tax should not be descriminatory. If the tax in question is for raising revenue for laying the Road, then all users of the Road may have to be subjected to payment. Picking out the seller only is discriminatory.

Besides, extending the liability throughout the 'Market area' is also not justified either for the fee or the tax. Regarding fee, the facility of the market' or 'yard' is not available throughout the 'area'. For the tax, it virtually amounts to 'sales tax'. In addition such extension leads to practical and administrative difficulties also both regarding levy and collection. Price also will go up." I can quote.

The Government cannot levy this fee in the entire market because they are not giving facilities in the entire area. They create facilities only in the market area, but not on all the sales that go on in the entire market area. I at least hope against hope that the Government will seriously consider this point. I have tried to discuss this matter with the Government and they have pointed out that there are cases pending in the Court and after the cases are disposed of they will consider. They took legal advise earlier, but they have ignored that advice and they have pushed the producers and buyers to go to Courts. I want to ask the government whether they are justified in doing so. I will not go on developing this idea further. I would like to point out how the power vested in government under sec. 29 of the Co-operative Societies Act is exercised. I would like to give one or two instances and close my speech.

Section 29 deals with the nominees of the Government on the committee of the Co-operative Societies. Under what circumstances the government can exercise this power and nominate persons on the Board to the extent of one-third of the total number of members of the committee of co-operative society. Instead of explaining it at length, I would like to show to the House how this has been exercised. Perhaps the Hon. Minister for Forest and Food was then the President of the Karnataka Pradesh Congress Committee. I am referring to the constitution of the Board of Consumers Federation. The Consumers Federation consists of 9 persons of whom 5 are elected and 4 are nominated officials. Government nominees are: the Registrar of Co-operative Societies, Director of Food and Civil Supplies,

Director of Agriculture and the Managing Director of the Consumers Federation. The Government took to its head to exercise their power under section 530 and nominated 3 more members. My remarks with all force are applicable to powers under Sec. 53 or section 29. So, the strength came upto 12. Out of this 12 5 persons are elected members; out of remaining 7, 4 are officials and 3 are nominated. Why did they do it? They have exercised the power to see that a particular person becomes the President of the Consumers Federation. Is it for that purpose you have this power? If it is so, say so. The exercise of such a power virtually amounted to nominating the Chairman for the Consumers Federation. I am not reffering to the names of persons who have been nominated They are all honourable gentlemen. It is only the government which is making a mistake. I am now highlighting these points to show that the government is making a mistake and are refusing to learn from the experience. Because of the wise decision of the then President of the Karnataka Pradesh Congress Committee, this Consumers Federation did not go to the Court or the affairs of the Consumers Federation did not result in a mess. He showed wisdom in yielding and the government was successful in having its own nominee got elected as the President of the Federation This has happened not in one case but it has happened in several cases. For example it has happened in Mysore District Wholesale Stores; it has happened in the Mandya Disrict Bank; it has happened in the Mysore regulated Market. In the Regulated Market of Mysore very interesting thing has happened. There was only one government nominee. The Government sent the Chief Marketing Officer to Mysore to see that the government nominee exercised his vote in favour of a person who was opposing the General Secretary of the District Congress Committee, Mysore. The Government did not go by party interest in their case. As the person of the party was not a person amenable to their influence, they went to the extent of opposing him. In this particular case, the entire government machinery took interest and saw that the General Secretary of the District Congress Committee who happened to be a very good co-operator, a very good public man, was defeated and another person was got elected. I do not like to pass any remark against the other person He was lucky to get the help of the government not because of the love towards him but because of the hatred that the government had against the General Secretary of the District Congress Committee. I know the hon. Minister is an honest man; he also knows him personally. If he says that my reading is wrong, I am prepared to apologise to this House This is how things are going on. There are umpteen number of instances. I am sorry to say that the entire co-operative field is becoming vitiated by personal considerations. If I had ample time, I would have shown to him how things are being deteriorated.

I will refer to one Taluka Marketing Co-operative Society, Krishnarajpet and be done with it. In Krishnarajpet, my hon. friend who is a member of this House Sri S M. Lingappa, was a moving spirit behind this society. I must take this occasion and pay glowing tribute to him for building up that society. This Taluka Marketing Society apart from its assets of building rice mill and the working capital is one of the rare societies which is not depending for any financial help from the district co-operative bank or the Apex Bank. It has been able to utilise the occasion to build up a fixed deposit of Rs 17 lakhs a reserve fund of Rs. 7½ lakhs, National Savings Certificates to the extent of Rs. 2½ lakhs, in all Rs 27 lakhs. They have enough working capital and they have paid back all the loans due to the government; they have even returned the share capital amount. I would like to ask what control this government can exercise on such a society ?

Again they have taken recourse either to section 29 or section 53A and they have nominated 4 persons there. They have done so with a view to see that the man who built up that organisation longer wielded influence. If anything goes wrong. the entire curse of those people would be on this government. I must say, wherever the government has meddled, it was with the intention of eliminating good persons and bringing self-seekers having no experience. Thus they have been responsible for ruining the societies. You know come from Srirangapatna Taluk. Sri Bandi Gowda there I cannot think of better man than him in the public life of this country, was also similarly treated. Dispite his professional engagements, he had given time for the building up of the Taluk Marketing Co-operative Society.

They made use of the provision of nomination and ousted out Mr. Bandi Gowda. Very soon it had to come under the administrator. All the affairs were mismanaged. The money that he had been able to save was also squandered. I don't like to go further. At least now, let the Government open its eyes and see that they do not indulge in such things They should not be led away by party consideration, or personal consideration or love or affection towards some people. It would be better if they kept away from all such institutions. With these words, I thank the Chair and conclude my speech.

ಶ್ರೀ ಹೆಚ್.ಡಿ. ದೇವೇಗೌಡ.—ಅಧ್ಯಕ್ಷರೆ, ತಮ್ಮ ಅನುಮತಿ ಮೇರೆಗೆ ಒಂದು ವಿಷಯವನು ಹೇಳುವುದಕ್ಕೆ ಇಚ್ಛೆಪಡುತ್ತೇನೆ; ಶಾಸಕಾಂಗದ ಕಾರ್ಯಾಲಯದಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಓವರ್ ಟೈಂ ಅಲೋಯನ್ಸ್ ಕೊಡುವ ಬಗ್ಗೆ ಸರ್ಕಾರ ಹಿಂದೆ ಒಪ್ಪಿತ್ತು. ದಯಮಾಡಿ ಅದರ ಬಗ್ಗೆ ತಾವು ಹೇಳಬೇಕು. ಏಕೆಂದರೆ, ರಾತ್ರಿ 8–9 ಗಂಟೆಯಾದರೂ ಇಲ್ಲಿ ಕೆಲಸ ಮಾಡಬೇಕಾಗುತ್ತದೆ. ಓವರ್ ಟೈಂ ಅಲೋಯನ್ಸ್ ಹೆಚ್ಚಿಗೆ ಕೊಡುವುದರಿಂದ ಸರ್ಕಾರಕ್ಕೆ ಅಂಥ ಮಹತ್ತರವಾದ ಭಾರ ಏನೂ ಬೀಳಲಾರದು.

ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಸಾಲ ವಸೂಲಿ ಬಗ್ಗೆ, ಅಭಾವ ಇರತಕ್ಕ ಪ್ರದೇಶಗಳಲ್ಲಿ ತಾತ್ಕಾಲಿಕವಾಗಿ ತಡವಾಡಿ: ಬೆಳೆ ಬಂದ ಮೇಲೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ

ರೆಗ್ಯೂಲೇಟೆಡ್ ಮಾರ್ಕೆಟ್ ಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಚ್ಛೆ ಪಡುತ್ತೇನೆ. ನನ್ನ ತಾಲ್ಲೂಕಿನಲ್ಲಿ ನಾಲೆ ಹಿಂಭಾಗದಲ್ಲಿ ಜಮೀನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಹೊರಟಿದ್ದೀರಿ. ಅಲ್ಲಿ ರೆಗ್ಯೂಲೇಟೆಡ್ ಮಾರ್ಕೆಟ್ ಅವಶ್ಯಕತೆ ಇದೆ ಎಂದು ಒಪ್ಪಿಕೊಳ್ಳುತ್ತೇನೆ. ಈಗ ಎಲ್ಲಾ ಹಾಸನಕ್ಕೆ ಹೋಗುತ್ತಾರೆ. ಅಲ್ಲಿ ಕೊರಮರು ಹಾಗೂ ಬೇರೆ ಬೇರೆ ಜಾತಿಯವರು ಇದ್ದಾರೆ. ಈ ವಿಚಾರದಲ್ಲಿ ಬೇರೆ ಕಡೆ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡಿ ದುಡ್ಡು ಕೊಟ್ಟರೆ ಉತ್ತಮವಾದ ಡ್ರೈ ಲ್ಯಾಂಡ್ ಸಿಗುತ್ತೆ.

† ಶ್ರೀ ಕೆ.ಹೆಚ್ ರಂಗನಾಥ್ (ಸಹಕಾರ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು) –ಸನ್ಮಾನ್ಯ ಅಧ್ಯಕ್ಷರೇ,ಮಾನ್ಯ ಸದಸ್ಯರುಗಳಿಗೆ ಕಾಲದ ಅಭಾವ ಇದ್ದಾಗ್ಯೂ ಕೂಡ ಸುಮಾರು 14 ಜನ ಸದಸ್ಯರುಗಳು ಆ ಕಡೆಯಿಂದ, ಮತ್ತು ಈ ಕಡೆಯಿಂದ ನಿನ್ನೆಯಿಂದ ನಡೆದಂತಹ ಚರ್ಚೆಯಲ್ಲಿ ಭಾಗವಹಿಸಿ, ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಎಲ್ಲೆಲ್ಲಿ ಲೋಪದೋಷಗಳು ಇವೆ ಅವುಗಳನ್ನು ಸರ್ಕಾರದ ಗಮನಕ್ಕೆ ತಂದು ಸರಿ ಮಾಡಬೇಕು ಎನ್ನುವ ಭಾವನೆಯಿಂದ ಹೇಳಿದ್ದಾರೆ. ಕೆಲವು ಸೂಚನೆಗಳನ್ನು ಹೇಳುವಾಗ ಅವರವರ ಧಾಟಿಗೆ ತಕ್ಕಂತೆ ಹೇಳಿದ್ದಾರೆ. ನಾನಾದರೂ ಕೂಡ ಇದರಲ್ಲಿರತಕ್ಕ ಅಭಿಪ್ರಾಯಗಳನ್ನು ಗ್ರಹಿಸುತ್ತೇನೆಯೇ ವಿನಃ ಬೇರೆ ಅನ್ಯಥಾ ಅರ್ಥವನ್ನು ಕೊಡಲಿಕ್ಕೆ ಪ್ರಯತ್ನ ಪಡುವುದಿಲ್ಲ. ನಾನು ಮಾನ್ಯ ಸದಸ್ಯರುಗಳು ಹೇಳಿದಂತ ಎಲ್ಲ ವಿಚಾರಗಳನ್ನು ಕೂಡ ಬಹಳ ಗಮನವಿಟ್ಟು ಕೇಳಿದ್ದೇನೆ. ಯಾವ ಯಾವ ಸಂಸ್ಥೆಗಳು ಸರಿಯಾಗಿ ಕೆಲಸ ನಡೆಸುತ್ತಿಲ್ಲ ಎಂದು ಹೇಳಿದ್ದಾರೆ ಅದನ್ನೆಲ್ಲಾ ನಾನು ಗಮನದಲ್ಲಿಟ್ಟುಕೊಂಡಿದ್ದೇನೆ.

ಇವತ್ತು ಸಹಕಾರ ಕ್ಷೇತ್ರ ಬಹಳ ವ್ಯಾಪಕವಾಗಿ ಬೆಳೆದಿದೆ. ಮಾನ್ಯ ಸದಸ್ಯರುಗಳು ಮಾಡಿರತಕ್ಕ ಟೀಕೆಗಳು ಹಾಗೂ ಸಲಹೆಗಳನ್ನು ನಾವು ಸೂಕ್ಷ್ಮವಾಗಿ ನೋಡುವುದಾದರೆ ವ್ಯವಸಾಯ ಸಹಕಾರ ಸಂಘಗಳನ್ನು ಏನು ಗ್ರಾಮಮಟ್ಟದಲ್ಲಿ ಪುನರ್ರಚನೆ ಮಾಡಿದ್ದೇವೆ; ಇದರ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದೇವೆ. ಪುನರ್ರಚನೆ ಮಾಡುವಾಗ ಅಲ್ಲಲ್ಲಿ ಆಗಿರತಕ್ಕ ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ ಮತ್ತೆ ಸಹಕಾರ ಕ್ಷೇತ್ರದಲ್ಲಿ ಲೆಕ್ಕಪತ್ರದ ತನಿಖೆ ಶೀಘ್ರವಾಗಿ ಆಗಬೇಕು. ಲೆಕ್ಕಪತ್ರ ಕಾಲಕ್ಕೆ ಸರಿಯಾಗಿ ಆದರೆ, ಆಯಾ ವರ್ಷಗಳಲ್ಲಿ ನಡೆಯುವ ಜನರಲ್ ಬಾಡಿ ಮೀಟಿಂಗ್ ಮುಂದೆ ಬಂದರೆ, ಲೋಪದೋಷಗಳನ್ನು ತತ್‌ಕ್ಷಣತಂದು ಮುಂದೆ ಸಹಕಾರ ಸಂಘದ ಆಡಳಿತಮಂಡಲಿಯವರು ತಪ್ಪು ಮಾಡದಂತೆ ವ್ಯವಸ್ಥೆ ಮಾಡಬಹುದು ಎನ್ನುವ ಅಭಿಪ್ರಾಯವನ್ನು ಕೂಡ ವ್ಯಕ್ತಪಡಿಸಿದ್ದಾರೆ. ಜೊತೆಗೆ ಆಡಿಟ್ ವಿಭಾಗ ಬೇರೆ ಮಾಡುವ ಅಭಿಪ್ರಾಯ ಕೂಡ ಪ್ರಸ್ತಾಪ ಮಾಡಿದ್ದಾರೆ. ಸಹಕಾರಿ ಸಕ್ಕರೆ ಕಂಪನಿಗಳಿಗೆ ಕೊಡತಕ್ಕ ಕಬ್ಬಿನ ಬೆಲೆ ನಿಗಧಿ ಬಗ್ಗೆ ಕೂಡ ಹೇಳಿದ್ದಾರೆ. ಕೆಲವು ಮಿತ್ರರೂ ಕೋ ಆಪರೇಟೀವ್ ಅಪಲೇಟ್ ಟ್ರಿಬ್ಯೂನಲ್ ಮತ್ತು ರೆವಿನ್ಯೂ ಅಪಲೇಟ್ ಟ್ರಿಬ್ಯೂನಲ್ ಹಾಗೂ ಸೇಲ್ಸ್ ಟ್ಯಾಕ್ಸ್ ಅಪಲೇಟ್ ಟ್ರಿಬ್ಯೂನಲ್‌ಗಳನ್ನು ಒಂದೇ ಸಂಸ್ಥೆಯಾಗಿ ಕೆಲಸ ಮಾಡುತ್ತಿರುವುದರಿಂದ, ದೂರುಗಳ ವಿಚಾರಣೆ ಆಗತಕ್ಕಂಥಾದ್ದು ತಡವಾಗುತ್ತಿದೆ ಎನ್ನುವ ಮಾತನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಸಹಕಾರ ಸಂಘಗಳ ಲೋಪದೋಷಗಳ ಬಗ್ಗೆ ಹಣ ದುರುಪಯೋಗವಾಗಿರುವ ಬಗ್ಗೆ ಸರಿಯಾಗಿ ಕೆಲಸ ಮಾಡದೇ ಇರುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಬೆಳೆ ಸಾಲ ಕೊಡುವ ವಿಚಾರದಲ್ಲಿ, ಎ, ಕಾಂಪಿನೆಂಟ್ ಮತ್ತು ಬಿ ಕಾಂಪಿನೆಂಟ್ ಮೇಲೆ ಹಣ ಕೊಡುತ್ತಿದ್ದೇವೆ, ಇದರ ಬಗ್ಗೆಯೂ ಕೂಡ ಸಲಹೆಗಳನ್ನು ಮಾಡಿದ್ದಾರೆ. ಶ್ರೀಮಾನ್ ಹೊರಕೇರಿಯವರು ರೈತನು ತಯಾರು ಮಾಡಿದಂತ ಗೊಬ್ಬರ ಹಾಗೂ ತಾನು ಬೆಳೆದಿರತಕ್ಕ ಬೀಜವನ್ನು ಆದರ ಕಾಸ್ಟ್‌ನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಅಧಿಕಾರಿವರ್ಗದವರ ಬಗ್ಗೆ ಕೆಲವರು ಪ್ರಸ್ತಾಪ ಮಾಡಿದ್ದಾರೆ. ಅರ್ಬಿಟ್ರೇಟರ್ಸ್‌ಗೆ ರಿಟೈರ್ ಆಗಿರತಕ್ಕ ಅಧಿಕಾರಿಗಳನ್ನು ಮಾಡುವುದು ಸರಿಯಾದುದು ಅಲ್ಲ: ವಕೀಲರಿಗೆ, ಲಾ ಗ್ರ್ಯಾಜ್ಯುಯೇಟ್‌ಗಳಾಗಿದ್ದರೂ ಸಾಕು ಅಂಥವರನ್ನು ಹಾಕಿ ಎಂದು ಸದಸ್ಯರು ಸಲಹೆ ಮಾಡಿದ್ದಾರೆ. ಹರಿಜನ ಗಿರಿಜನರಿಗೆ ಸಂಬಂಧ ಪಟ್ಟಂತೆ ಮನೆ ಕಟ್ಟುತಕ್ಕ ಸಹಕಾರ ಸಂಘಗಳು ಏನು ಇವೆ,

ಇದರ ಬಗ್ಗೆ ಮಾನ್ಯ ಪುಟ್ಟಸ್ವಾಮಿಯವರು ಪ್ರಸ್ತಾಪ ಮಾಡಿದ್ದಾರೆ. ಇಲಾಖೆಯ ಮುಖ್ಯ ಅಧಿಕಾರಿಗಳನ್ನು ಐ.ಎ.ಎಸ್. ಅಧಿಕಾರಿಗಳನ್ನು ಇಟ್ಟುಕೊಳ್ಳುತ್ತಿದ್ದೀರಿ, ಆದರಿಂದ ಇಲಾಖೆಯಲ್ಲಿರತಕ್ಕ ಸಮರ್ಥ ಅಧಿಕಾರಿಗಳಿಗೆ ಅಸಮಾಧಾನವಾಗಬಹುದು ಎನ್ನುವ ಮಾತನ್ನು ಪ್ರಸ್ತಾಪ ಮಾಡಿದ್ದಾರೆ,

ಪ್ರಮುಖವಾಗಿ ಶಾಸಕಾಂಗ ಪ್ರತ್ಯೇಕವಾಗಿ ಆಗಬೇಕು ಎನ್ನುವ ಅಭಿಪ್ರಾಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ವಿರೋಧಪಕ್ಷದ ನಾಯಕರು ಇಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಓವರ್ ಟೈಂ ಅಲೋಯನ್ಸ್ ಕೊಡಬೇಕು ಎಂದು ಹೇಳಿದ್ದಾರೆ ಇನ್ನೊಬ್ಬ ಮಿತ್ರರಾದ ಕುಲಕರ್ಣಿಯವರು ಅರ್ಬನ್ ಲ್ಯಾಂಡ್ ಬಗ್ಗೆ ಹೇಳುತ್ತಾ, ಟ್ರಸ್ಟ್ ವಗೈರೆಗಳಲ್ಲಿರತಕ್ಕ ಹಣವನ್ನು ಡಿಪಾಸಿಟ್ ಆಗಿ ಸ್ವೀಕಾರ ಮಾಡುವುದಕ್ಕೆ ಸರ್ಕಾರ ಅಪ್ಪಣೆ ಕೊಡಬೇಕೆಂದು ಹೇಳಿದ್ದಾರೆ. ಭೂಅಭಿವೃದ್ಧಿ ಬ್ಯಾಂಕುಗಳಿಂದ ಕೊಡತಕ್ಕ ಹಣ ಸರಿಯಾದ ರೀತಿಯಲ್ಲಿ ಉಪಯೋಗ ವಾಗುವುದಿಲ್ಲ ಎಂದು ಕೆಲವರು ಹೇಳಿದ್ದಾರೆ. ಮತ್ತೆ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕ ಜನರನ್ನು ನೇಮಕ ಮಾಡುವುದಕ್ಕೆ ಏನು ರೆಕ್ರೂಟ್‌ಮೆಂಟ್ ಅಥಾರಿಟಿ ಮಾಡಿದ್ದೇವೆ. ಅದರಲ್ಲಿ ಅಧಿಕಾರಿಗಳಿಗೆ ಬದಲಾಗಿ ಹಿಂದೆ ಇದ್ದಂತೆ ಎಕ್ಸಿಕ್ಯೂಟಿವ್ ಕಮಿಟಿಗೆ ಅಧಿಕಾರ ಕೊಡಿ ರಿಸರ್ವೇಷನ್ ಬಗ್ಗೆ ಸರ್ಕಾರ ಇಟ್ಟುಕೊಳ್ಳಲಿ ಎನ್ನುವ ಅಭಿಪ್ರಾಯವನ್ನು ಕೂಡ ಕೊಟ್ಟಿದ್ದಾರೆ.

ಇನ್ನು ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಏನೇನು ಪ್ರಸ್ತಾಪ ಮಾಡಿದ್ದಾರೆ ಅದನ್ನೂ ಕೂಡ ನೋಡಬೇಕು ಎನ್ನುವ ವಿಚಾರವನ್ನು ಮಾನ್ಯ ಪುಟ್ಟಸ್ವಾಮಿಯವರು ಹೇಳಿದ್ದಾರೆ. ಎಲ್ಲದಕ್ಕಿಂತ ಹೆಚ್ಚಾಗಿ ಮಾನ್ಯ ಪುಟ್ಟಸ್ವಾಮಿಯವರು ಸೆಕ್ಷನ್ 29ರ ಕೆಳಗೆಯಾಗಲೀ, ಅಥವಾ ಸೆಕ್ಷನ್ 53 (ಎ)ರ ಕೆಳಗೆಯಾಗಲೀ ನಾಮಕರಣ ಮಾಡುವುದು ಅಷ್ಟು ಸರಿಯಾದುದಲ್ಲ ಇದರಿಂದ ತೊಂದರೆಯಾಗುತ್ತದೆ ಎನ್ನುವ ಮಾತನ್ನು ಕೂಡ ಪ್ರಸ್ತಾಪಮಾಡಿದ್ದಾರೆ. ಒಟ್ಟಿನಲ್ಲಿ... ...

1-30 P. M.

Pamphets thrown from the visitors Gallery

(ಪ್ರೇಕ್ಷಕರ ಗ್ಯಾಲರಿಯಿಂದ ಮೂರು ನಾಲ್ಕು ಜನ ಪ್ರೇಕ್ಷಕರು ಕಲವಾರು ಪಾಂಪ್ಲೆಟ್ಸ್ ಗಳನ್ನು ಎಸೆದು ಕೂಗಲಾರಂಭಿಸಿದರು)

Madam Speaker, there is specific provision that passes should be issued only after it is duly certified by an hon. Member. I personally feel that the hon, member will have to take responsiblity for these things. (At this stage, Sri Kagodu Thimmappa tried to interrupt): I am on my legs. I have not yielded. It is the privillege of this House and I am making this request, I am not making it on behalf of myself but I am making it on behalf of the whole House and also on behalf of the Speaker. The entry to any gallery, has, as a matter of fact, to be regulated.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಂಸದೀಯ ಸಚಿವರು ಏನು ಹೇಳುತ್ತಾರೆ ಅವನ್ನು ನಾನು ಒಪ್ಪುತ್ತೇನೆ ಇದರ ಬಗ್ಗೆ ನಾವು ಬಹಳ ಬಿಗಿ ಮಾಡಬೇಕಾಗುತ್ತದೆ ಏಕೆಂದರೆ ಈ ಸದನದಲ್ಲಿ ನಾವು ನಿರ್ಭಯವಾಗಿ ಕೆಲಸ ಮಾಡಲಿಕ್ಕೆ ಕೂಡ ನಮಗೆ ಅವಕಾಶ ಇದೆ. ಯಾರಿಗೆ ಬೇಕೋ ಅವರಿಗೆ ಪಾಸ್ ಕೊಡುವುದನ್ನು ಸ್ವಲ್ಪ ಬಿಗಿಮಾಡಬೇಕಾಗಿದೆ. ಯಾರಾದರೂ ಕೈಬಾಂಬ್ ಎಸೆದು ಹೋದರೆ ನಾವು ಮಾಡುವುದಾದರೂ ಏನು?

We cannot allow such things to go on here, whether the mistake is committed at this end or on the other side. While signing passes, they should be more careful. I am very sorry for the incident.

SRI K. H. RANGANATH:—I would only appeal to the hon. Speaker to issue necessary instructions.

ಅಧ್ಯಕ್ಷರು.—ಈ ನೋಟೀಸ್ ನನಗೆ ಸಂಬಂಧಪಟ್ಟಿದ್ದಾಗಿದೆ. ಇದರಲ್ಲಿ ಏನೇನು ಇದೆ ಎನ್ನುವುದನ್ನು ನಾನು ಹೇಳಬೇಕಾಗಿರುವುದು ಅಗತ್ಯ. ತಮಗೆಲ್ಲಾ ಗೊತ್ತಿರುವ ಹಾಗೆ ನಾನು ಮೈಸೂರು ರಾಜ್ಯದಲ್ಲಿ, ಮೈಸೂರು ಜಿಲ್ಲೆಗೆ ಸೇರಿದ ಗುಂಡ್ಲುಪೇಟೆ ತಾಲ್ಲೂಕಿನ ಒಂದು ಶ್ರೀಮಂತ ಕುಟುಂಬಕ್ಕೆ ಸೇರಿದ ಹೆಣ್ಣುಮಗಳು. ನಮ್ಮ ಯಜಮಾನರ ತಂಗಿಯ ಮಕ್ಕಳಿಗೂ ನನಗೂ 5-6 ವರ್ಷದಿಂದ ಕೋರ್ಟಿನಲ್ಲಿ ವ್ಯಾಜ್ಯ ಇತ್ತು. ವ್ಯಾಜ್ಯದ ತೀರ್ಮಾನಗಳನ್ನು ಯಾರೂ ಬೇಕಾದರೂ ನೋಡಬಹುದು. ನಮ್ಮ ಯಜಮಾನರಿಂದ ಆಸ್ತಿಯ ಬಗ್ಗೆ ಬರೆದಂಥ ವಿಲ್ ಇದೆ. ಇದನ್ನು ಬೇಕಾದರೂ ನಾನು ಅಸೆಂಬ್ಲಿಯಲ್ಲಿಡುವುದಕ್ಕೆ ತಯಾರಿದ್ದೇನೆ. ನನ್ನ ನಂತರ ನನ್ನ ಆಸ್ತಿ, ನಮ್ಮ ಹಾಸ್ಟಲಿನಲ್ಲಿರತಕ್ಕ ಚಾರಿಟಬಲ್ಸ್ ಇನ್‌ಸ್ಟಿಟ್ಯೂಷನ್ಸ್ ಮತ್ತು ಮಕ್ಕಳಿಗೆ ಅರ್ಧ, ಅರ್ಧ ಹೋಗಬೇಕು ಎಂದು ವಿಲ್‌ನಲ್ಲಿದೆ. ನಾನು ಬದುಕಿರುವವರೆಗೆ ಅದು ಎಲ್ಲಿಯೂ ಹೋಗುವ ಹಾಗಿಲ್ಲ. ನನ್ನ ಹತ್ತಿರ ಕೆಲಸ ಮಾಡುತ್ತಿದ್ದವರಿಗೆ ಇದನ್ನು ಟೆನೆನ್ಸಿಗೆ ಕೊಡುವುದಕ್ಕೆ ನನಗೆ ಹಕ್ಕು ಇತ್ತು. ಇದು ಲ್ಯಾಂಡ್ ರಿಫಾರ್ಮ್ಸ್ ಬರುವುದಕ್ಕೆ ಮುಂಚೆ ಇತ್ತು. ಇವರೆಲ್ಲಾ ಅವರವರು ಸೇರಿ ಇದರ ಬಗ್ಗೆ ಡಿಕ್ಲರೇಷನ್ ಕೊಟ್ಟಿದ್ದಾರೆ. ಇದು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿದೆ. ಇದನ್ನು ಅವರಿಗೆ ಕೊಡಬಾರದು, ಎಂದು ನನ್ನ ನಾದಿನಿಯ ಮಗ ಶಿವಸ್ವಾಮಿ; ಲಾ ಕಾಲೇಜಿನಲ್ಲಿದ್ದಾನೆ, ಇವನು ಈ ರೀತಿಯಾಗಿ ಹೇಳಿಕೊಟ್ಟು ಮಾಡಿಸುತ್ತಿದ್ದಾನೆ. ಮೊನ್ನೆಯ ದಿವಸ ಯಾರೋ ಬಂದು ನನಗೆ ಇದನ್ನು ಹೇಳಿದರು. ಇದು ಲೋಕವಾಣಿ ಪತ್ರಿಕೆಯಲ್ಲಿಯೂ ಬಂದಿತ್ತು, ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಇವತ್ತು ಬಂದಿದೆ. ಶ್ರೀ ಶಿವಸ್ವಾಮಿ ಲಾ ಕಾಲೇಜಿನಲ್ಲಿರತಕ್ಕ ಟೀಚರ್, ಇವನು ಮಾಡಿಸಿದ್ದಾನೆ. ಇದು ನನಗೆ ಚೆನ್ನಾಗಿ ಗೊತ್ತಿದೆ. ಅವನನ್ನು ವಿಚಾರಿಸಬೇಕಾಗಿದೆ. ಅವರ ಅಣ್ಣತಮ್ಮಂದಿರಲ್ಲಿಯೇ ಕೋರ್ಟಿನಲ್ಲಿ ಕೇಸ್ ಹಾಕಿ ಕೊಂಡಿದ್ದಾರೆ. ಇದನ್ನು ಅವರಿಗೆ ಕೊಡಬೇಕು, ಟೆನೆಂಟ್ಸ್‌ಗೆ ಕೊಡಬಾರದು ಎಂದು ಕೋರ್ಟಿನಲ್ಲಿ ಕೇಸ್ ಹಾಕಿದ್ದಾರೆ. ಇದು ಯಾವುದೂ ಇನ್ನೂ ಇತ್ಯರ್ಥವಾಗಿಲ್ಲ. ನಗಲಿಯಲ್ಲಿರತಕ್ಕ ಭೂಮಿಯನ್ನೂ 1963-64ರಲ್ಲಿ ಟೆನೆಂಟ್ಸ್‌ಗೆ ಎಂದು ಹೇಳಿಬಿಟ್ಟು ಡಿಕ್ಲೇರ್ ಮಾಡಿದ್ದಾರೆ. ಈ ವಿಷಯ ಮಾನ್ಯ ಸದಸ್ಯರಾದ ಶಿವಯ್ಯನವರಿಗೆ ಗೊತ್ತು. ಅವರುಗಳಿಗೆ ಇದನ್ನು ಗ್ರಾಂಟ್ ಮಾಡಿದ್ದಾರೆಂದು ಕಾಣುತ್ತದೆ. ನಾನು ಇದರ ಕಾಂಪನ್ಸೇಷನ್ ಕೂಡ ತೆಗೆದು ಕೊಂಡಿಲ್ಲ ಕಾಂಪನ್ಸೇಷನ್ ಕೊಡಕೂಡದು ಎಂದು ಗಲಾಟೆ ಮಾಡುತ್ತಿದ್ದಾರೆ. ಇದು ನ್ಯಾಯಾದಿ ಮತ್ಸರ ಈ ಭೂಮಿ ಡಿಕ್ಲೇರ್ ಆದಮೇಲೆ ಕಾಂಪೆನ್ಸೇಷನ್ ತೆಗೆದುಕೊಳ್ಳುವ ಅಧಿಕಾರ ನನಗೆ ಇದೆ. I cannot spend it because it is life estate. I have no power to lease out or sell the property according to this Will.

ಶ್ರೀ ಕೆ ಎಚ್. ರಂಗನಾಥ್.— ನನ್ನ ಪ್ರಾರ್ಥನೆ ಏನೆಂದರೆ, ಮಾನ್ಯ ಸದಸ್ಯರುಗಳು ಯಾರಿಗೆ ಬೇಕಾದರೂ ಈ ರೀತಿಯಾಗಿ ಪಾಸ್ ಕೊಡುವುದಕ್ಕೆ ಸೈನ್ ಹಾಕಿದರೆ ಇಂಥ ಗಲಾಟೆ ವಗೈರೆಗಳನ್ನು ತಪ್ಪಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಇವರಿಗೆ ಯಾರು ಪಾಸ್ ಕೊಟ್ಟರು ಯಾರು ಇದಕ್ಕೆ ಸಹಿ ಹಾಕಿದ್ದಾರೆ ಎನ್ನುವುದನ್ನು ವಿಚಾರಿಸಬೇಕು ಮತ್ತು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ವಿಷಾದದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ಯಾರು ಪಾಸ್ ಕೊಡಲಿಕ್ಕೆ ಸಹಿ ಹಾಕಿದ್ದಾರೆ ಎನ್ನುವುದನ್ನು ವಿಚಾರಣೆ ಮಾಡಬೇಕು. For creating this ugly situation you should give proper punishment to those who are responsible for this incident. They must be brought before the House and the House should give sufficient punishment.

ಶ್ರೀ ಕೆ. ಎಚ್ ರಂಗನಾಥ್ — ಇವತ್ತು ನಾನು ಸಭೆಗೆ ಉತ್ತರ ಕೊಡುವುದಕ್ಕೆ ಮುಂಚೆ ಮಾನ್ಯ ಸದಸ್ಯರುಗಳು ಕಟ್ ಮೋಷನ್ಸ್ ಏನು ಕಳುಹಿಸಿದ್ದಾರೆ ಅವರ ಬಗ್ಗೆ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಸಹಕಾರಿ ಇಲಾಖೆಗೆ ಸಂಬಂಧಪಟ್ಟಂತೆ ಮಾನ್ಯ ಶಾಮಣ್ಣನವರು ಕಟ್ ಮೋಷನ್ಸ್ ಕಳುಹಿಸಿದ್ದಾರೆ. ಮತ್ತೆ ಅವರೇ ನನ್ನ ಡಿಮ್ಯಾಂಡ್ ನಂಬರ್ 1ಕ್ಕೆ ಸಂಬಂಧಪಟ್ಟಂತೆ ಕಟ್ ಮೋಷನ್ ಕಳುಹಿಸಿದ್ದಾರೆ. ಅವರು ಕಟ್ ಮೋಷನ್‌ನಲ್ಲಿ ಪ್ರಸ್ತಾಪ ಮಾಡಿರತಕ್ಕದ್ದು, ಈ ಸಹಕಾರ ಸಂಸ್ಥೆಗಳನ್ನು ಸರ್ಕಾರದ ಇಲಾಖೆಗಳ ರೀತಿಯಲ್ಲಿ ನಡೆಸಬೇಕು ಹಾಗೆ ಎನ್ನುವ ಮಾತನ್ನು ಹೇಳಿದ್ದಾರೆ. ಮತ್ತೆ ಇನ್ನೊಂದು ವಿಷಯ ಏನೆಂದರೆ ಉದಯೋನ್ಮುಖ ಬರಹಗಾರರ ಗೃಹ ನಿರ್ಮಾಣ ಸಹಕಾರ ಸಂಘ ಮತ್ತು ಮೈತ್ರಿಕೋ ಗೃಹ ನಿರ್ಮಾಣ ಸಹಕಾರ ಸಂಘಗಳು ಏನು ಇವೆ ಇದರಲ್ಲಿ ತೊಂದರೆಗೆ ಈಡಾಗಿರತಕ್ಕಂಥಾ ಜನ ಏನು ಇದ್ದಾರೆ ಯಾರಿಗೆ ಜಾಗ ಬೇಕಾಗಿತ್ತೋ ಅವರಿಗೆ ಜಾಗವನ್ನು ಕೊಡಿಸತಕ್ಕಂಥಾ ಕೆಲಸ ಆಗಬೇಕು ಎಂದು ಹೇಳಿದ್ದಾರೆ. ಮತ್ತೆ ಈ ಒಂದು ವರ್ತನೆಗೆ ಮತ್ತು ಅವ್ಯವಹಾರಕ್ಕೆ ಒಳಗಾಗಿರುವಂಥಾ ಜನ ಏನು ಇದ್ದಾರೋ ಅವರ ಮೇಲೆ ತಕ್ಕ ಕ್ರಮವನ್ನು ಕೈಗೊಳ್ಳಬೇಕು ಅನ್ನುವ ಮಾತನ್ನೂ ಸಹ ಹೇಳಿದ್ದಾರೆ. ಮತ್ತೆ ಇನ್ನೇನು ಹೇಳಿದ್ದಾರೆ ಎಂದರೆ ಈ ಸಹಕಾರೀ ಸಂಘಗಳಲ್ಲಿ ಸಾಲ ಸುಸ್ತಿ ಏನು ಉಳಿದಿದೆಯೋ ಅದನ್ನು ವಸೂಲ್ ಮಾಡುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಅನ್ನುವ ಮಾತನ್ನೂ ಸಹ ಹೇಳಿದ್ದಾರೆ. ಮತ್ತು ಜಿಲ್ಲಾ ಬ್ಯಾಂಕುಗಳ ಯಾವುದು ಸರಿಯಾಗಿ ಕೆಲಸ ಮಾಡುವುದಿಲ್ಲವೋ ಅದನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. "Failure of Government in taking steps against many district co-operative banks which are working in a very unsatisfactory condition" ಅನ್ನುವ ಮಾತನ್ನು ಹೇಳಿದ್ದಾರೆ.

ಇನ್ನು ಡಿಫಂಕ್ಟ್ ಸೊಸೈಟಿ ಬಗ್ಗೆ ಅಂದರೆ ಕೆಲಸ ಮಾಡದೇ ಇರತಕ್ಕಂಥಾ ಸೊಸೈಟಿಗಳ ಬಗ್ಗೆ ಸರ್ಕಾರದವರು ತಕ್ಕ ಕ್ರಮ ತೆಗೆದುಕೊಳ್ಳಬೇಕು ಅನ್ನುವ ಮಾತನ್ನು ಹೇಳಿದ್ದಾರೆ.

ಇನ್ನು ಒಂದನೇ ಡಿಮ್ಯಾಂಡ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ ಅವರು ಈ ಕೆಳಗೆ ಕಂಡ 4 ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಯಾವ್ಯಾವುವು ಎಂದರೆ:

> "Failure of the Government in preparing the voters list in a proper way, to facilitate all eligible voters to exercise their votes.
>
> Failure of the Government to provide proper facilities at polling Booths.
>
> Failure of Government in taking steps to prepare Bills, enactments in Kannada.
>
> Failure of Government in arranging follow-up action for implementing several good issues raised on the floor of the House."

ಇನ್ನು ಮಾನ್ಯ ರುದ್ರಪ್ಪನವರು ಮಾತನಾಡುವಾಗ ಲೆಜಿಸ್ಲೇಚರ್ ಸೆಕ್ರೆಟೇರಿಯಟ್ ಇಂಡಿಪೆಂಡೆಂಟ್ ಆಗಿ ಇರಬೇಕು ಅನ್ನುವ ಮಾತನ್ನು ಹೇಳಿದರು. ಈ ಬಗ್ಗೆ ಬೇರೆ ಬೇರೆ ಸದಸ್ಯರೂ ಸಹ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಮಾನ್ಯ ಶ್ರೀಮಾನ್ ಶಾಮಣ್ಣನವರು ಕೊಟ್ಟಂಥಾ ಕಟ್ ಮೋಷನ್ಸ್ ಮೇಲೆ ಮೊದಲು ಉತ್ತರ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಾನು ಈ ಬಗ್ಗೆ ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಅವರು ಏನು ಹೇಳಿದ್ದಾರೆ ಎಂದರೆ ಈ ಸಹಕಾರಿ ಸಂಸ್ಥೆಗಳನ್ನು ಒಂದು ಸರ್ಕಾರಿ ಇಲಾಖೆಯನ್ನಾಗಿ ನಡೆಸಬೇಕು ಅನ್ನುವ ಬಗ್ಗೆ ಏನು ಪ್ರತಿಪಾದನೆ ಮಾಡುತ್ತಿದ್ದಾರೋ ಅದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಮತ್ತು ಆ ರೀತಿ ನಡೆಸತಕ್ಕಂಥಾದ್ದು ಸಹ ಸರಿಯಾಗಿ

ಇರುವುದಿಲ್ಲ. ಈಗಾಗಲೇ ಈ ಬಗ್ಗೆ ನಾವು ಏನು ಮಾಡಿದ್ದೇವೆ ಎಂದರೆ ಯಾವ ಒಂದು ಸಹಕಾರೀ ಸಂಸ್ಥೆಯಲ್ಲಿ ಒಂದು ಹೆಚ್ಚಿನ ಹಸ್ತಕ್ಷೇಪ ನಡೆದಿದೆ ಅನ್ನುವ ಅಪಾದನೆ ಇದೆಯೋ ಅಂಥ ಕಡೆ ಸರ್ಕಾರದವರು ನಾಮಕರಣ ಮಾಡಿ ಆ ಬಗ್ಗೆ ಒಂದು ಹತೋಟಿಯನ್ನು ಇಟ್ಟುಕೊಂಡಿರುವುದರಿಂದ ಮತ್ತೆ ಇದನ್ನು ಒಂದು ಸರ್ಕಾರಿ ಇಲಾಖೆಯನ್ನಾಗಿ ನಡೆಸಬೇಕು ಎಂದರೆ ಅದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಎಲ್ಲೆಲ್ಲಿ ಹೆಚ್ಚು ಹೆಚ್ಚು ಹಣವನ್ನು ಹಾಕಿದೆಯೋ ಅಂಥಾ ಕಡೆ ತನ್ನ ಪ್ರತಿನಿಧಿಗಳನ್ನು ಹಾಕಿದ್ದಾರೆ. ಅವರು ಕೆಲಸವನ್ನು ಮಾಡುತ್ತಿದ್ದಾರೆ ಅದು ಒಂದು ದೊಡ್ಡ ಸಂಸ್ಥೆಯಾಗಿದ್ದರೆ ಅಂಥಾ ಕಡೆ ಕಾರ್ಯದರ್ಶಿಯಾಗಿಯೋ, ಮ್ಯಾನೇಜಿಂಗ್ ಡೈರಕ್ಟರ್ ಆಗಿಯೋ ಹಾಕಿದ್ದೇವೆ. ಈ ರೀತಿಯಾಗಿ ಸರ್ಕಾರೀ ಅಧಿಕಾರಿಗಳನ್ನು ಹಾಕಿ ಅವುಗಳನ್ನು ಒಂದು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಮೇಲ್ವಿಚಾರಣೆ ಮಾಡುವುದಕ್ಕೆ ಮಾಡಿದ್ದೇವೆ ಆದುದರಿಂದ ಮಾನ್ಯ ಸದಸ್ಯರು ಈ ಬಗ್ಗೆ ತಂದಿರುವ ಕಟ್ ಮೋಷನ್ ಬಗ್ಗೆ ಇಷ್ಟು ಉತ್ತರ ಹೇಳಿದರೆ ಸಾಕಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಎರಡನೆಯದಾಗಿ ಪ್ರಾಮುಖ್ಯವಾದ ಒಂದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರೆಲ್ಲರೂ ಕೂಡ ಈ ಸಹಕಾರೀ ಸಂಘಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಕೆಲಸ ಮಾಡಿದ್ದಾರೆ ಎಂದು ಹೇಳಬಹುದು ಅದು ಹೌಸ್ ಬಿಲ್ಡಿಂಗ್ ಕೋ ಅಪರೇಟೀವ್ ಸೊಸೈಟಿಯೇ ಆಗಿರಲಿ ಯಾವ ಒಂದು ಸೊಸೈಟಿಯೇ ಆಗಿರಲಿ, ಒಂದು ಕ್ರೆಡಿಟ್ ಸೊಸೈಟಿಯೇ ಆಗಿರಲಿ, ಅಥವಾ ಅದು ಒಂದು ಮಾರ್ಕೆಟಿಂಗ್ ಫೆಡರೇಷನ್ ಆಗಿರಲ್ಲಿ ಅವರು ಯಾವ ಸೊಸೈಟಿಯಲ್ಲಿ ಕೆಲಸ ಮಾಡಿರಲಿ ಈ ಬಗ್ಗೆ ಅವರು ಹೇಳಿರುವ ಉದ್ದೇಶ ಒಂದೇ ಆಗಿರುತ್ತದೆ. ಅದು ಏನು ವಿಷಯ ಎಂದರೆ ಅಲ್ಲಿ ಅಪವ್ಯಯವಾಗುತ್ತಿದೆ, ಅಲ್ಲಿರತಕ್ಕಂಥಾ ಅಧಿಕಾರಿ ಮಂಡಲ ಯಾರ ಹಿತಕ್ಕಾಗಿ ಯಾರ ರಕ್ಷಣೆಗಾಗಿ ಇರಬೇಕೋ ಅವರ ಹಿತರಕ್ಷಣೆ ನೋಡಿಕೊಳ್ಳವೇ ಅದರ ತದ್ವಿರುದ್ಧವಾಗಿ ಕೆಲಸ ಮಾಡುತ್ತಿದ್ದಾರೆ ಅನ್ನುವ ಒಂದು ಅಭಿಪ್ರಾಯವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಏನು ಹೇಳಿದ್ದಾರೆ ಎಂದರೆ. "Failure of the Government in allowing the poor members of Young Writers and Artists Co-operative Housing Society, Bangalore to suffer without relief. ಅನ್ನುವ ಮಾತನ್ನು ಹೇಳಿದ್ದಾರೆ ಮಾನ್ಯ ಕಾಗೋಡು ತಿಮ್ಮಪ್ಪನವರು ಪ್ರಸ್ತಾಪ ಮಾಡುತ್ತಾ ಅವರೂ ಕೂಡ ಇದರ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ ನೀವು ತಪ್ಪು ಮಾಡಿರುವವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದರೆ ಅದು ನನ್ನದಲ್ಲ ಅನ್ನುವ ಮಾತನ್ನು ಹೇಳಿದ್ದೀರಿ ಅಂತ ಹೇಳಿದ್ದಾರೆ ಮತ್ತು ಆ ಸಂಸ್ಥೆಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಮುಂಚೆ ಅಲ್ಲಿ ಕೆಲವು ಆಸ್ತಿಗಳು ನಷ್ಟವಾಗಿದೆ ಅಂತ ಹೇಳಿದ್ದಾರೆ. ಸುಮಾರು 6 ಲಕ್ಷ ರೂಪಾಯಿಯಷ್ಟು ಹಣ ನಷ್ಟವಾಗಿದೆ ಅನ್ನುವ ಮಾತನ್ನು ಹೇಳಿದ್ದಾರೆ. ಮತ್ತು ಅಲ್ಲಿ ಒಂದು ಪಂಪ್‌ಸೆಟ್ ಕೂಡ ಇದೆ ಅನ್ನುವ ಮಾತನ್ನು ಹೇಳಿದ್ದಾರೆ. ಪ್ರಾಮುಖ್ಯವಾಗಿ ಇದರ ಬಗ್ಗೆ ಶ್ರೀಮಾನ್ ಶಾಮಣ್ಣನವರು ಏನು ಹೇಳಿದರು ಎಂದರೆ ಈ ಒಂದು ಸಂಸ್ಥೆಯಿಂದ ಯಾರು ವಂಚನೆಗೆ ಒಳಗಾಗಿದ್ದಾರೋ ಅವರು ಷೇರುದಾರರಾಗಿ ಇರಬಹುದು ಅಥವಾ ಇನ್ನು ಯಾವುದ ದರೂ ಆಗಿರಬಹುದು, ಒಟ್ಟಿನಲ್ಲಿ ಅವರು ಜಾಗ ಸಿಕ್ಕುತ್ತದೆ ಅನ್ನುವ ಒಂದು, ಆಸೆಯಿಂದ ಆ ಹಣವನ್ನು ಈ ಸಂಸ್ಥೆಯಲ್ಲಿ ಏನು ಇಟ್ಟಿದ್ದರೋ ಅಂಥಾವರಿಗೆ ಜಾಗವನ್ನು ಒದಗಿಸಿ ಕೊಡಿರಿ ಅನ್ನುವ ಮಾತನ್ನು ಹೇಳಿದ್ದಾರೆ. ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಈ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಇದರಲ್ಲಿ ನನ್ನದೇನೂ ಅಭ್ಯಂತರ ಇಲ್ಲ ಎಂದು ಹೇಳಿದ್ದಾರೆ, ಸರ್ಕಾರ ಅತಿ ಶೀಘ್ರವಾಗಿ ಆ ಜನಕ್ಕೆ ಯಾವರೀತಿ ಸಹಾಯ ಮಾಡಬೇಕೋ ಅದನ್ನು ವಿಚಾರ ಮಾಡುತ್ತದೆ ಎಂದು ಅಷ್ಟು ಮಾತ್ರ ಹೇಳುತ್ತೇನೆ.

ಇನ್ನು ಮೂರನೇ ಕಟ್ ಮೋಷನ್ಸ್ ಬಗ್ಗೆ ಹೇಳುವುದಾದರೆ ಉದಯೋನ್ಮುಖ ಬರಹಗಾರರ ಗೃಹ ನಿರ್ಮಾಣ ಸಹಕಾರ ಸಂಘ ಮತ್ತು ಮೈಕೋ ಗೃಹ ನಿರ್ಮಾಣ ಸಹಕಾರ ಸಂಘ ಈ ಎರಡು ಸೊಸೈಟಿಗಳಲ್ಲೂ ಸಹ ಸಾಕಷ್ಟು ಹಣ ಅಪವ್ಯಯವಾಗಿದೆ ದುರ್ವಿನಿಯೋಗವಾಗಿದೆ ಅನ್ನುವ ಮಾತನ್ನು ಹೇಳಿದ್ದಾರೆ. ಈ ಬಗ್ಗೆ ನಾನು ಹೇಳಬೇಕಾದರೆ ಈ ಉದಯೋನ್ಮುಖ ಬರಹಗಾರರ ಗೃಹ ನಿರ್ಮಾಣ ಸಂಘದಲ್ಲಿ ಸುಮಾರು 80 ಲಕ್ಷ ರೂಪಾಯಿಯಷ್ಟು ಅಪವ್ಯಯವಾಗಿದೆ ಮತ್ತು ಮೈಕೋ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಸುಮಾರು 71 ಲಕ್ಷ ರೂಪಾಯಿಯಷ್ಟು ಅಪವ್ಯಯ

ವಾಗಿದೆ. ಮತ್ತೆ ಇದಕ್ಕೆ ಯಾರು ಕಾರಣಕರ್ತರಾಗಿದ್ದಾರೋ ಅವರು ಈವೊತ್ತು ಈ ಬಗ್ಗೆ ಒಂದು ಹೊಸ ಸ್ವರೂಪವನ್ನು ತಳೆದಿದ್ದಾರೆ. ಅಂದಿನ ದಿನ ಈ ಸಂಸ್ಥೆಯಲ್ಲಿ ಯಾರು ಯಾರು ಅಧಿಕಾರಿ ಮಂಡಳಿಯಲ್ಲಿ ಇದ್ದರೋ, ಯಾರು ಅಧಿಕಾರಿ ಮಂಡಲಿಯಲ್ಲಿ ಪಾತ್ರ ವಹಿಸಿದ್ದರೋ ಅವರೇ ಇವೊತ್ತು ಏನು ಮಾಡಿದ್ದಾರೆ ಎಂದರೆ ಅಲ್ಲಿದಂಥಾ ಜನರೇ ಅವರ ಪರವಾಗಿ ಬೇರೆ ಜನರನ್ನು ಕಳುಹಿಸಿ ಇವರಿಗೆ ಓಟು ಮಾಡುವಂತೆ ಅವರನ್ನು ಮತ್ತೆ ಆ ಜಾಗದಲ್ಲಿ ಕೂಡಿಸುವುದಕ್ಕೆ ಆ ಜನರೇ ಹೋರಾಟ ಮಾಡಿದ್ದಾರೆ. He has become the champion of those people whom he has, if I may put it mildly, cheated or if it is a still stronger word misused them. ಈ ರೀತಿ ಆಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮೈಕೋ ಗೃಹ ನಿರ್ಮಾಣ ಸಹಕಾರ ಸಂಘದ ಬಗ್ಗೆ ಹೇಳಿ.

ಶ್ರೀ ಕೆ. ಹೆಚ್. ರಂಗನಾಥ್.—ಈ ಎರಡು ಸೊಸೈಟಿ ಅಲ್ಲದೆ ಇನ್ನೂ ಒಂದು ಸೊಸೈಟಿ ಇದೆ. ಆ ಬಗ್ಗೆ ನಾನು ಇನ್ನೂ ಹೇಳಿಲ್ಲಾ. ಒಟ್ಟಿನಲ್ಲಿ ಹೇಳುವುದಾದರೆ ಅದು ಇನ್ನೂ 50 ಲಕ್ಷದ ಮೇಲೆ ಹೋಗಿಲ್ಲಾ 50ರ ಒಳಗೇ ಇದೆ. ಇದು ಏನು ತೋರಿಸುತ್ತದೆ ಎಂದರೆ ಒಟ್ಟಿನಲ್ಲಿ ಹೇಳುವುದಾದರೆ ಇಂತಹ ಒಂದು ಸಂಸ್ಥೆಯನ್ನು ಮಾಡಿಕೊಂಡು ಅನೇಕ ಮುಗ್ಧ ಜನರನ್ನು ಮೋಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಅನ್ನುವುದು ಸ್ಪಷ್ಟವಾಗುತ್ತದೆ.

ಇನ್ನೊಂದು ಸೊಸೈಟಿ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಪ್ರಸ್ತಾಪ ಮಾಡಿದರು ಅದರ ಬಗ್ಗೆ ತದನಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ ಈ ಉದಯೋನ್ಮುಖ ಬರಹಗಾರರ ಗೃಹ ನಿರ್ಮಾಣ ಸಹಕಾರೀ ಸಂಸ್ಥೆ ಅಂತ ಏನು ಇದೆ ಅದು ಮೊದಲು ಗೃಹ ನಿರ್ಮಾಣ ಸಹಕಾರೀ ಸಂಸ್ಥೆಯಾಗಿ ಅಸ್ತಿತ್ವಕ್ಕೆ ಬಂದಿರಲಿಲ್ಲ. ಅದು ಮೊದಲು ಒಂದು ಅಸೋಸಿಯೇಷನ್ ಆಗಿ ಅಸ್ತಿತ್ವಕ್ಕೆ ಬಂದಿತು. 1969ರಲ್ಲಿ ಈ ಸೊಸೈಟಿ ಕಾನೂನು ಪ್ರಕಾರ ರಿಜಿಸ್ಟ್ರೇಷನ್ ಮಾಡಿ ಸುಮಾರು 1850 ಜನರನ್ನು ಆ ಸೊಸೈಟಿಗೆ ಸದಸ್ಯರನ್ನಾಗಿ ಮಾಡಿದರು.

ಅದರಲ್ಲಿ ಕೂಡ ಅವರು ಮನೆ ಕಟ್ಟುವುದಕ್ಕೆ ಜಾಗ ಕೊಡುವುದಾಗಲೀ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿದ ಬಗ್ಗೆ ಯಾಗಲೀ ಯಾವುದೂ ಕಂಡುಬರುವುದಿಲ್ಲ. ಆದರೂ ಸಹ ಮನೆ ಕಟ್ಟುವುದಕ್ಕೆ ಜಾಗ ಕೊಂಡುಕೊಳ್ಳುವುದು, ಮನೆ ಕಟ್ಟಿಸುವುದು, ಲೇ-ಔಟ್ ವಗೈರೆ ಮಾಡತಕ್ಕಂಥ ಕಾರ್ಯಕ್ರಮಗಳನ್ನು ಕೂಡ ಬೈಲಾದಲ್ಲಿ ಸೇರಿಸಿಕೊಂಡಿದ್ದೇವೆಂದು ಹೇಳುತ್ತಾರೆ. ಆದರೆ ಅವರ ಬೈಲಾದಲ್ಲಿ ಇದಕ್ಕೆಲ್ಲಾ ಅವಕಾಶವಿಲ್ಲ. ಆದರೂ 1973ರಲ್ಲಿ ಎಂದು ಕಾಣುತ್ತದೆ, ಈ ಒಂದು ಸಂಸ್ಥೆಯ ಮೂಲಕವೇ ಹೌಸ್-ಬಿಲ್ಡಿಂಗ್ ಕೋಆಪರೇಟಿವ್ ಸೊಸೈಟಿ ಅಸ್ತಿತ್ವಕ್ಕೆ ಬಂದಿದೆ. ಇದಕ್ಕಾಗಿ 1 81,575 ರೂ.ಗಳನ್ನು ಷೇರು ಮೊಬಲಗನ್ನಾಗಿ ತೆಗೆದುಕೊಂಡಿದ್ದಾರೆ. ಆ ಸಂಸ್ಥೆಯಲ್ಲಿದ್ದ ಸದಸ್ಯರನ್ನೇ ಇಲ್ಲಿಗೂ ಸದಸ್ಯರನ್ನಾಗಿ ಮಾಡಿಕೊಂಡಿದ್ದಾರೆ. ಈ ಸಂಸ್ಥೆಯ ಆಡಳಿತ ಮಂಡಲಿಯಲ್ಲಿ ಯಾರು ಅಧ್ಯಕ್ಷರಾಗಿದ್ದರೂ, ಅವರ ಹತ್ತಿರದ ಸಂಬಂಧಿಗಳೇ ಹೆಚ್ಚಾಗಿ ಈ ಸೊಸೈಟಿಯಲ್ಲಿ ಇದ್ದರೆಂಬುದು ನಮ್ಮ ಆಡಿಟ್ ವರದಿಯಿಂದ ತಿಳಿದು ಬಂದಿದೆ. ಸುಮಾರು 11 ಲಕ್ಷ ರೂ.ಗಳಷ್ಟು ದುರ್ವ್ಯವಹಾರ ಈ ಸಹಕಾರಿ ಗೃಹನಿರ್ಮಾಣ ಸಂಘದಲ್ಲಿ ನಡೆದಿದೆ. ಇಂತಹ ಸೊಸೈಟಿಗಳನ್ನು ಸರ್ಕಾರ ತನ್ನ ಹತೋಟಿಗೆ ತೆಗೆದುಕೊಳ್ಳುವ ಸಲುವಾಗಿಯೇ 30(ಎ) ಎಂಬುದಾಗಿ ಹೊಸ ತಿದ್ದುಪಡಿಯೊಂದನ್ನು ಮಾಡಿದ್ದೇವೆ. ಇದಕ್ಕೆ ಮೊದಲು ಇಂತಹ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಬೇಕಾದರೆ ಷೋಕಾಸ್ ನೋಟೀಸ್ ಕೊಟ್ಟು ಅವರಿಂದ ಉತ್ತರ ಪಡೆಯಬೇಕಾಗಿತ್ತು. ಅನಂತರ ನಾವು ಏನಾದರು ತೀರ್ಮಾನ ತೆಗೆದುಕೊಂಡರೆ, ಅದರ ಮೇಲೆ ಅಪೀಲು ಮಾಡಿಕೊಳ್ಳಲು ಅವರಿಗೆ ಅವಕಾಶವಿರುತ್ತಿತ್ತು. ಇದನ್ನೆಲ್ಲಾ ತಪ್ಪಿಸಬೇಕೆಂಬ ಉದ್ದೇಶದಿಂದಲೇ ಸೆಕ್ಷನ್ 30ಕ್ಕೆ ತಿದ್ದುಪಡಿ ಮಾಡಿ 30(ಎ)ನ್ನು ಸೇರಿಸಲಾಯಿತು. ಈ ಸೆಕ್ಷನ್ ಪ್ರಕಾರ ಈ ಸಂಘಕ್ಕೆ ಸ್ಪೆಷಲ್ ಆಫೀಸರ್ ಒಬ್ಬರನ್ನು ನೇಮಕ ಮಾಡಿದ್ದೇವೆ. ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್‌ಗೂ ಸಹ ತಿದ್ದುಪಡಿ ಮಾಡಿದ್ದೇವೆ. ಇದರ ಪ್ರಕಾರವೇ ಈ ಅಸೋಸಿಯೇಷನನ್ನು ಸಹ ನಮ್ಮ ವಶಕ್ಕೆ ತೆಗೆದುಕೊಂಡಿದ್ದೇವೆ. ತುಮಕೂರು ಜಿಲ್ಲೆಯಿಂದ ಸೀನಿಯರ್ ಆಡಿಟರೊಬ್ಬರನ್ನು ಕರೆಸಿ ಅವರ ಸಹಾಯಕ್ಕೆ ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟಿನಿಂದ 6 ಜನರನ್ನು ಕೊಟ್ಟು ಈ ಅಸೋಷಿಯೇಷನ್ ಅಕೌಂಟ್ಸನ್ನು ಆಡಿಟ್ ಮಾಡಿಸಲಾಗಿದೆ.

ಈ ಆಡಿಟ್ ಲೆಕ್ಕದ ಪ್ರಕಾರ ಗೃಹನಿರ್ಮಾಣ ಸಂಘದಲ್ಲಿ ಸುಮಾರು 11 ಲಕ್ಷ ರೂ.ಗಳಷ್ಟು ಮತ್ತು ಅಸೋಸಿಯೇಷನ್‌ಗೆ ಸಂಬಂಧಪಟ್ಟಂತೆ 38 ಲಕ್ಷದ 40 ಸಾವಿರ ರೂ.ಗಳಷ್ಟು ಹಣ ಅವ್ಯವಹಾರವಾಗಿದೆ ಎಂದು ತಿಳಿದು ಬಂದಿದೆ. ಇವೆರಡರ ಲೆಕ್ಕವನ್ನು ತೆಗೆದುಕೊಂಡರೆ ಸುಮಾರು 50 ಲಕ್ಷ ರೂಪಾಯಿಗಳಿಗೂ ಹೆಚ್ಚು ಅವ್ಯವಹಾರ ನಡೆದಿದೆ ಎಂದು ಕಾಣುತ್ತಿದೆ. ಇವರು ಸದಸ್ಯರಿಂದ 86 ಲಕ್ಷ ರೂಪಾಯಿಗಳವರೆಗೆ ವಸೂಲಿ ಮಾಡಿರುವುದು ಕಾಣುತ್ತಿದೆ.

ಮಾನ್ಯ ಅಧ್ಯಕ್ಷರೇ, ಈ ಸಂಸ್ಥೆಯನ್ನು ನಮ್ಮ ವಶಕ್ಕೆ ತೆಗೆದುಕೊಂಡ ಮೇಲೆ ನೊಂದಂತಹ ಜನರು ಬಹಳ ಬೇಸರಪಟ್ಟುಕೊಂಡು ನನಗೆ ತಾರೀಖು 26-8-1976ರಲ್ಲಿ ಒಂದು ಪತ್ರವನ್ನು ಬರೆದಿದ್ದಾರೆ. ತಮ್ಮ ಅಪ್ಪಣೆ ಪಡೆದು ಅದನ್ನು ಓದುತ್ತೇನೆ.

"Kindly accept our heart-felt thanks for the much needed action by Government to take over the management of the Writers and Artists House Building Co-operative Society Limited. Bangalore-4. Today's news about this take over gladdened all our hearts and revived our faith in the efficient administration of Government and the Departmental Officers in our State. We are confident that the Deputy Registrar of Co-operative Societies who has been appointed as the Special Officer of the Society would set right all matters and ensure proper distribution of sites to all the members at reasonable rates without much loss of time."

ಈ ರೀತಿ ಸುಮಾರು 30-40 ಜನರು ಸಹಿ ಮಾಡಿ ಈ ಒಂದು ಪತ್ರವನ್ನು ನನಗೆ ಬರೆದಿದ್ದಾರೆ. ಇದೇ ರೀತಿ ಇನ್ನೊಬ್ಬರು ಅಂದರೆ ಡಿಪಾರ್ಟ್‌ಮೆಂಟ್ ಆಫ್ ಹೈ-ವೋಲ್ಟೇಜ್ ಇಂಜಿನಿಯರಿಂಗ್ ಅಂಡ್ ಸೈನ್ಸ್ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಪ್ರತಿಭಾನ್ವಿತ ಪ್ರೊಫೆಸರ್ ಒಬ್ಬರು ನನಗೆ ಒಂದು ಪತ್ರ ಬರೆದಿದ್ದಾರೆ. ಅವರು ತಮ್ಮ ಪತ್ರದಲ್ಲಿ ಮನನೊಂದುಕೊಂಡು ಈ ರೀತಿ ಬರೆದಿದ್ದಾರೆ. ಇದನ್ನು ತಮ್ಮ ಅಪ್ಪಣೆ ಪಡೆದು ಒಂದು ನಿಮಿಷದಲ್ಲಿ ಓದಿ ಮುಗಿಸುತ್ತೇನೆ.

"There are about 2000 members in the above Society of which I am a member. Mr. B. Krishna Bhatt (Ratna Vilas Road Bangalore-4) is the Secretary. In the name of procuring house sites cheaply to the members a large sum of money (70-80Lakhs) was callected. There has been gross irregularities in the operation of the Society. Hence at a General Body meeting held in November 1975 a Sub-Committee was constituted under the compulsion of the members to look into the working of the Society. Please see the enclosed letter addressed to the Chief Minister earlier which explains the case in a nut shall.

I learn that orders for the superseding of the WAHBCS was issued by the Registrar of Co-operative Societies several months ago this year but no action appears to have been taken to give effect to the orders as the Society of the WAHBCS is still busy going about his activities and consolidating his position. This naturally has given reasonable room for suspicion that the Administration

at various levels is indifferent to the implementation of the orders there by giving sufficient time and scope for the Secretary to manipulate the affairs in his favour In the mean while the Secretary called a meeting (which he claims as the General Body meeting) on the 25th July 1975 at 10–30 A.M., where in a resolution was tabled and carried out to expel some of the members of the Sub-Committee in total disregard of the rules and procedures for such expulsion I have been a member of the Sub-Committee and I have been expelled from the Society wtihout being given a show cause notice and an opportunity to defend myself. At the time of the meeting booklets and handouts were distributed slandering the members of the Sub-Committee

In view of the gross irregularities in the WAHBCS, I beseech you kindly to take immediate steps to supersede the Society and appoint your able administrators to look after the interests of the members and to bearing the guilty persons to book. I request you kindly to give me an opportunity to meet you so that I can personally explain the case in full"

ಶ್ರೀ ಆರ್. ಎಸ್. ಎನ್. ರಾವ್ ಅವರು ಈ ರೀತಿ ಪತ್ರ ಬರೆದಿದ್ದಾರೆ. ಅವರು ಎಷ್ಟರಮಟ್ಟಿಗೆ ನೊಂದಿದ್ದಾರೆಂಬುದು ಇದರಿಂದ ಅರ್ಥವಾಗುತ್ತದೆ. ಈ ಒಂದು ತೊಡಕಿಗೆ ಒಳಗಾಗಿರುವವರು ಹೆಚ್ಚಾಗಿ ಕಾರ್ಮಿಕರೇ ಆಗಿದ್ದಾರೆ. ಎಚ್. ಎ. ಎಲ್ ಹಾಗೂ ಐ. ಟಿ. ಐ.ಗೆ ಸೇರಿದವರಾಗಿದ್ದಾರೆ. ಅವರು ಒಂದು ಕಡೆ 113 ಎಕರೆ ಮತ್ತೊಂದು ಕಡೆ 31 ಎಕರೆ ಹೀಗೆ ಒಟ್ಟು 144 ಎಕರೆ ಭೂಮಿಯನ್ನು 9 ಲಕ್ಷ ಚಿಲ್ಲರೆ ಹಣಕ್ಕೆ ಕೊಂಡಿದ್ದಾರೆ. ಈ ರೀತಿ ಕೊಂಡ ಮೇಲೆ ಅದನ್ನು ಸೈಟುಗಳನ್ನಾಗಿ ಮಾಡಿ ಅಲಾಟ್ ಮಾಡುತ್ತೇವೆಂದು ಈ ಮೇಲ್ಕಂಡ ಕಂಪನಿಗಳಿಗೆ ಕಾಗದ ಬರೆದು, ಅಲ್ಲಿನ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್‌ನಿಂದ ಹಣ ದೊರಕುವ ರೀತಿಯಲ್ಲಿ ಮಾಡಿ ಕೊನೆಗೆ ಆ ಕಾರ್ಮಿಕರು ತೊಂದರೆಗೀಡಾಗುವಂತೆ ಸಹ ಮಾಡಿರುವುದು ಇದರಲ್ಲಿ ಕಂಡುಬರುತ್ತದೆ.

2–00 P. M.

ಇವೊತ್ತು ಬೆಂಗಳೂರು ಡೆವೆಲಪ್‌ಮೆಂಟ್ ಅಥಾರಿಟಿಯವರು ಈ ಲೇ-ಔಟನ್ನು ಅಪ್ರೂವ್ ಮಾಡಿದ್ದಾರೆ. ಅದಕ್ಕೆ ಹಣವನ್ನು ಕಟ್ಟಬೇಕಾಗುತ್ತದೆ. ಇಷ್ಟೆಲ್ಲಾ ಆದರೂ ಕೂಡ ಇಂದು ಸರ್ಕಾರದವರು ಈ ಸಂಸ್ಥೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಇವೊತ್ತು ಈ ಸಂಸ್ಥೆಯ ಕ್ಯಾಷ್ ಬ್ಯಾಲೆನ್ಸ್ ನೋಡುವುದಾದರೆ ಇದರಲ್ಲಿ 85 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಕ್ಯಾಷ್ ಬ್ಯಾಲೆನ್ಸ್ ಕಾಣುವುದಿಲ್ಲ. ಇಂಥಾ ಒಂದು ಪರಿಸ್ಥಿತಿಗೆ ಒಳಗು ಮಾಡಿದಾರೆ. 40 ಸೈಟುಗಳನ್ನು ಮಾಡಿ ಹಂಚತಕ್ಕ ಪರಿಸ್ಥಿತಿ ಇತ್ತು ಎಂದು ಹೇಳಿದ್ದಾರೆ. ಈ ಒಂದು ಕ್ರಮವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಭೇಟಿ ಮಾಡಿದ್ದಾರೆ. ನಂತರ ಈ ಕ್ರಮವನ್ನು ತೆಗೆದುಕೊಂಡಿದೆ. ಮಿಸಾದಲ್ಲಿ ಅರೆಸ್ಟ್ ಆಗಿದ್ದು ಬಿಡುಗಡೆ ಆದ ವೇಳೆ ಮತ್ತೆ ಅವರು ನನ್ನ ಮನೆಗೂ ಬಂದಿದ್ದರು. ಮತ್ತು ನನ್ನ ಚೇಂಬರಿಗೂ ಬಂದಿದ್ದರು. ಮತ್ತು ಎಲ್ಲಾ ವಿಚಾರಗಳನ್ನು ಮಾತನಾಡಿದರು. ಜನಗಳಿಗೆ ಸೈಟುಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿದ್ದಾರೆ. ಹಣವನ್ನು ಈ ಸೈಟುಗಳಲ್ಲಿ ಹಾಕಿದ್ದೇವೆ ಎಂದು ಹೇಳಿದರು ಈ ಬಗ್ಗೆ ನಾನೂ

ನಮ್ಮ ಅಧಿಕಾರಿಗಳ ಹತ್ತಿರ ಡೆಪ್ಯುಟಿ ರಿಜಿಸ್ಟ್ರಾರ್ ಹತ್ತಿರ ವಿಚಾರ ಮಾಡಿದ್ದೇನೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಅಲ್ಲಿ 6 ಲಕ್ಷ ರೂಪಾಯಿಗಳ ಮೆಟೀರಿಯಲ್ಸ್ ಇತ್ತು ಎಂದು ಹೇಳಿದ್ದಾರೆ. ಇವೊತ್ತು ಅಲ್ಲಿ ಒಬ್ಬರು ಐ.ಎ.ಎಸ್. ಅಧಿಕಾರಿ ಶ್ರೀಮತಿ ವೀಣಾ ಶ್ರೀರಾಮ್ ಎನ್ನುವವರನ್ನು ಅಡ್ಮಿನಿಸ್ಟ್ರೇಟರ್ ಆಗಿ ನೇಮಕ ಮಾಡಿದ್ದೇವೆ. ಡೆಪ್ಯುಟಿ ರಿಜಿಸ್ಟ್ರಾರ್ ಅವರನ್ನು ಸ್ಪೆಷಲ್ ಆಫೀಸರ್ ಆಗಿ ನೇಮಕ ಮಾಡಿದ್ದೇವೆ. ಮಹಜರ್ ಮಾಡಿದ್ದೇವೆ. ಈ ಬಗ್ಗೆ ಅಧಿಕಾರಿಗಳೇನಾದರೂ ತಪ್ಪು ಮಾಡಿದ್ದರೆ ಅವರಿಗೆ ನಾವು ಶಿಕ್ಷೆ ವಿಧಿಸುವುದಕ್ಕೆ ತಯಾರಾಗಿದ್ದೇವೆ. ಇದಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಈ ಸಭೆಯ ಮುಂದೆ ಇಡುವುದಕ್ಕೆ ನಾನು ತಯಾರಾಗಿದ್ದೇನೆ. ಇಷ್ಟು ಮಾತ್ರ ಹೇಳುತ್ತೇನೆ. ಒಂದೊಂದು ಸೈಟನ್ನು ಒಬ್ಬರಿಗಿಂತ ಹೆಚ್ಚು ಜನಗಳಿಗೆ ಮಾರಾಟ ಮಾಡಿದ್ದಾರೆ. ಅದನ್ನು ಸಿ. ಓ. ಡಿ.ಯವರು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ. ಎಲ್ಲಾ ದಾಖಲೆಗಳೂ ಅವರ ಸ್ವಾಧೀನದಲ್ಲಿಯೇ ಇವೆ. ಆದರೂ ಕೂಡ ಒಬ್ಬರಿಗಿಂತ ಹೆಚ್ಚು ಜನಗಳಿಗೆ ಒಂದು ಸೈಟನ್ನು ಮಾರಾಟ ಮಾಡಿದ್ದರಿಂದ ಆ ಬಗ್ಗೆ ಕೇಸನ್ನು ಹಾಕಿದೆ. ಆ ಸಂಘದ ಅಧ್ಯಕ್ಷರು ಬಹಳ ಬುದ್ಧಿವಂತರು. ಅವರು ಆಂಟಿಸಿಪೇಟರಿ ಬೈಲ್ ತೆಗೆದುಕೊಂಡು ಬಿಡುಗಡೆಯಾಗಿದ್ದಾರೆ, ಆದಾಗ್ಯೂ ಕೂಡ ಅವರ ಮೇಲೆ ಕೇಸು ಹಾಕಿದೆ. ಮೊನ್ನೆ ಪತ್ರಿಕೆಯಲ್ಲಿ ಇದರ ಬಗ್ಗೆ ಒಂದು ಲೇಖನ ಬಂದಿವೆ. ಇದರ ಬಗ್ಗೆ ನಮ್ಮ ಅಧಿಕಾರಿಗಳು ಮತ್ತೆ ವಿಚಾರ ಮಾಡಿದ್ದಾರೆ ಮತ್ತು ಕೇಸು ಹಾಕಿದ್ದಾರೆ ಆದ್ದರಿಂದ ಇದರ ಬಗ್ಗೆ ನಾನು ಇನ್ನು ಹೆಚ್ಚು ಲಂಬಿಸುವುದಕ್ಕೆ ಹೋಗುವುದಿಲ್ಲ ಈ ಸಂದರ್ಭದಲ್ಲಿ ನಾನು ಒಂದು ಮಾತ್ರ ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತೇನೆ. ಅಲ್ಲಿ ಯಾರು ಯಾರು ತೊಂದರೆಗೆ ಒಳಗಾಗಿದ್ದಾರೆ, ಯಾರಿಗೆ ಸೈಟು ಬೇಕಾಗುತ್ತದೆ ಅದನ್ನು ನಾವು ಕೊಡಿಸುವುದರಲ್ಲಿ ಯಾವ ರೀತಿ ಸಹಾಯ ಮಾಡಬೇಕು ಎಂಬುದನ್ನು ಸರ್ಕಾರದವರು ವಿಚಾರ ಮಾಡುತ್ತೇವೆ. ಇದರ ಬಗ್ಗೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ಲೇಔಟ್ ಚಾರ್ಜ್ ಅನ್ನು ಕಟ್ಟಬೇಕಾಗುತ್ತದೆ.

ಮೈಕೋ ಎಂಪ್ಲಾಯೀಸ್ ಹೌಸ್ ಬಿಲ್ಡಿಂಗ್ ಕೋಆಪರೇಟಿವ್ ಸೊಸೈಟಿಯ ವಿಷಯವೂ ಹೀಗೆಯೇ ಆಗಿದೆ. 71.41 ಲಕ್ಷ ರೂಪಾಯಿಗಳು ಇಲ್ಲಿ ಪೋಲಾಗಿದೆ ಎಂದು ಕಾಣುತ್ತದೆ. ಇವರ ಅಸೋಸಿಯೇಷನ್‌ನಲ್ಲಿ ಕಾರ್ಮಿಕರ ಗೃಹನಿರ್ಮಾಣ ಸಂಘ ಎಂದು ಮಾಡಿಕೊಂಡು ಜಾಗವನ್ನು ಕೊಂಡು ಲೇಔಟ್ ಮಾಡಿದ್ದಾರೆ. ಆ ಸಂಘದವರು ಮನೆಗಳನ್ನು ಕಟ್ಟಿಸುವುದಕ್ಕೆ ಇದಕ್ಕೆ ಸಂಬಂಧಪಟ್ಟ ಹಾಗೆ ಇರತಕ್ಕ ರಾಘವೇಂದ್ರ ಎಂಟರ್‌ಪ್ರೈಸಸ್ ಎನ್ನುವ ಒಂದು ಸಂಸ್ಥೆಗೆ ಹಣವನ್ನು ಅಡ್ವಾನ್ಸ್ ಕೊಡುತ್ತಾ ಬಂದಿದ್ದಾರೆ. ಇವರ ಕೆಲಸ ಏನು ಎಂದರೆ ಜಾಗವನ್ನು ಕೊಳ್ಳುವುದು, ಲೇಔಟ್ ಮಾಡುವುದು ಮನೆಗಳನ್ನು ಕಟ್ಟಿಸಿಕೊಡುವುದು. ಇವರು 51 ಎಕರೆ ಜಮೀನನ್ನು ಫಸ್ಟ್ ಸ್ಟೇಜಿನಲ್ಲಿ ಕೊಂಡುಕೊಂಡಿದ್ದಾರೆ. ಸೆಕೆಂಡ್ ಸ್ಟೇಜಿನಲ್ಲಿ 21 ಎಕರೆ 31 ಗುಂಟೆ ಜಮೀನನ್ನು ಕೊಂಡುಕೊಂಡಿದ್ದಾರೆ. ಈ ಹೌಸ್ ಬಿಲ್ಡಿಂಗ್ ಕೋಆಪರೇಟಿವ್ ಸೊಸೈಟಿಯಲ್ಲಿ ಸುಮಾರು 807 ಜನ ಸದಸ್ಯರಿದ್ದಾರೆ. ಇದರಲ್ಲಿ ಷೇರ್ ಕ್ಯಾಪಿಟಲ್ 5,47,800 ರೂಪಾಯಿಗಳು ಇದೆ ಈ ಗೃಹನಿರ್ಮಾಣ ಸಹಕಾರ ಸಂಘ 1966-67ನೇ ಸಾಲಿನಲ್ಲಿ ರಿಜಿಸ್ಟರ್ ಆಗಿದೆ. ಸುಮಾರು 71,13,313 ರೂಪಾಯಿ 44 ಪೈಸಾ ಇದರಲ್ಲಿ ಇನ್‌ವಾಲ್ವ್ ಆಗಿದೆ. ಈ ಗೃಹ ನಿರ್ಮಾಣ ಸಂಘದಲ್ಲಿ ಪಿ ವಿ. ವಿಜಯ ರಾಘವನ್ ಎನ್ನುವವರು ಹಿಂದೆ ಇದ್ದಂತಹ ಸೆಕ್ರೆಟರಿಗಳು ಈ ಗೃಹ ನಿರ್ಮಾಣ ಸಂಘದಲ್ಲಿ 51 ಎಕರೆ 9 ಗುಂಟೆ, ಎರಡನೇ ಹಂತದಲ್ಲಿ 21 ಎಕರೆ ಜಮೀನನ್ನು ಕೊಂಡಿದ್ದಾರೆ. ಇದನ್ನು ಕೊಂಡುಕೊಳ್ಳುವುದಕ್ಕೆ 11,34 8''4 ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಸಂಘದವರಿಗೆ ಸದಸ್ಯರು ಸೈಟಿಗಾಗಿ ಏನು ಅಡ್ವಾನ್ಸ್ ರೂಪದಲ್ಲಿ ಹಣವನ್ನು ಕೊಟ್ಟಿದ್ದಾರೆ. ಆ ಹಣವನ್ನು ಬೇರೆಯವರಿಗೆ 12 ರೂಪಾಯಿ ಬಡ್ಡಿಯಂತೆ ಬ್ಯಾಂಕಿನ ವ್ಯವಹಾರ ರೀತಿ ಮಾಡಿದ್ದಾರೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ಲೇಔಟ್ ಚಾರ್ಜನ್ನು ಕಟ್ಟಿಲ್ಲ ಈಗ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ 34 24,925 ರೂಪಾಯಿಗಳ ಲೇಔಟ್ ಚಾರ್ಜಸ್ ಕಟ್ಟಬೇಕಾಗುತ್ತದೆ. ಅದನ್ನು ಕಟ್ಟಿದರೆ ಲೇಔಟ್ ಅಪ್ರೂವ್ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ.

ಈಗ ಸದಸ್ಯರು ಇದರಲ್ಲಿ ಏನು ತೊಂದರೆಗೆ ಒಳಗಾಗಿದ್ದಾರೆ. ಅವರಿಗೆ ಈ ಎರಡೂ ಸಂಸ್ಥೆಗಳ ವಿಚಾರವನ್ನೂ ಕೂಡ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ......

ಶ್ರೀ ಕಾಗೋಡು ತಿಮ್ಮಪ್ಪ —71 ಲಕ್ಷ ರೂಪಾಯಿಗಳನ್ನು ಹೇಗೆ ಖರ್ಚು ಮಾಡಿದಿರಿ ?

ಶ್ರೀ ಎಚ್. ಡಿ. ದೇವೇಗೌಡ —11 ಲಕ್ಷ ರೂಪಾಯಿ ಬೆಲೆ ಬಾಳುವ ಭೂಮಿಯನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಇನ್ನೊಂದು ದೊಡ್ಡ ಫೈಲ್ ಇದೆ, ಅದರಲ್ಲಿ ಇದು ಎಲ್ಲಾ ಇದೆ.

ಶ್ರೀ ಎಚ್. ಡಿ. ದೇವೇಗೌಡ —ಮಾನ್ಯ ಮಂತ್ರಿಗಳು ಫೈಲನ್ನು ಹುಡುಕುತ್ತಿದ್ದಾರೆ. ಅವರ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ ವಿರೋಧಪಕ್ಷದ ಪತಿಯಿಂದ ಬರುವ ಇನ್‌ಫರ್ಮೇಷನ್ ಎಲ್ಲಾ ಅಧಿಕೃತವಾದ ಅಂಶಗಳು ಇಲ್ಲದೇ ಇರಬಹುದು, ನಾನು ಒಪ್ಪಿಕೊಳ್ಳುತ್ತೇನೆ

I accept the statement of the Hon'ble Minister; he has got accurate figures based on the reports of the officers. The information I have been able to gather is only from outside The Writers' Co-operative Society subsequently got converted into Housing Co-operative Society formed into an association with a financial involvement of Rs. 86 lakhs. According to them, Rs. 30 lakhs was paid for the purchase of 134 acres of land, Rs 28 lakhs for civil works, Rs. 6.14 lakhs C. I. T. B Deposit, Rs 4 lakhs for conversion deposit. A sum of Rs. 13 lakhs has been refunded to the members through cheques and Rs 6 lakhs for materials. This is according to the information given by them Myself and Sri Kagodu Thimmappa have gone and seen the place. They have spent money on civil works lay-out and drainage. I am not able to estimate the exact amount they have spent. That should be verified by technical persons. They have laid out a beautiful lay-out. According to the figures given by the Hon'ble Minister the Mic society had Rs. 71 lakhs and they have spent Rs. 11 lakhs on purchase of land when the person belonging to Writers' Co-operative Society was taken under MI-A, how is it this Mico society was not superseded. We want to know why different treatment was given to different institutions.

ಶ್ರೀ ಕೆ. ಎಚ್. ರಂಗನಾಥ್,—ಅಧ್ಯಕ್ಷರೇ, ಮೈಕೋ ಬಗ್ಗೆ ನಾನು ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ಮಾಡಲಿಲ್ಲ. ಮೊದಲು ಅದು ನನ್ನ ಗಮನಕ್ಕೂ ಕೂಡ ಬರುತ್ತಾ ಇರಲಿಲ್ಲ, ಅಲ್ಲಿ ಒಂದು ಮ್ಯಾನೇಜ್‌ಮೆಂಟ್ ಬದಲಾವಣೆಯಾಗಿ ಹೊಸ ಮ್ಯಾನೇಜ್‌ಮೆಂಟ್ ಬಂದ ಮೇಲೆ ನಮಗೂ ಮತ್ತು ಸಿ. ಒ. ಡಿ. ಯವರಿಗೂ ಅರ್ಜಿಗಳನ್ನು ಕೊಟ್ಟಿದ್ದರು. ಹೊಸ ಮ್ಯಾನೇಜ್‌ಮೆಂಟ್ ಬಂದು ಆಡಳಿತ ತೆಗೆದುಕೊಂಡ ಮೇಲೆ ನನ್ನ ಹತ್ತಿರ ಬಂದು ದುಡ್ಡು ಇಲ್ಲ ನಾವು ಹೊಸದಾಗಿ ಬಂದ ನೌಕರ ವರ್ಗ ಹೆಚ್ಚು ಸೇರಿರತಕ್ಕಂಥಾವರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದಾಗ ನಾವು ಅದನ್ನು ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ನಮ್ಮ ಇಲಾಖೆಯಿಂದ ಪ್ರಾರಂಭ ಮಾಡಿದೆವು. ಅಷ್ಟು ಹೊತ್ತಿಗೆ ಸಿ ಒ. ಡಿ ಇಂದಲೂ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದರು ಹೀಗಾಗಿ 30 (ಎ) ನಲ್ಲಿ ಬೇರೆ ಇನ್ನೊಂದು ಸೊಸೈಟಿ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಹೊಸ ಮ್ಯಾನೇಜ್‌ಮೆಂಟ್‌ನವರು ಬಂದು ಎಲ್ಲಾ ವಿಚಾರಗಳನ್ನು ಹೇಳಿದ್ದರಿಂದ ಇರುವ ಮ್ಯಾನೇಜ್‌ಮೆಂಟ್‌ನ್ನು ತೆಗೆಯುವುದು ಸರಿಯಲ್ಲ ಎಂದು ಸೂಪರ್‌ಸೀಡ್ ಮಾಡಲಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ರೈಟರ್ಸ್ ಸೊಸೈಟಿ ಬಗ್ಗೆ ಹೇಳಿದ್ದಾರೆ. ಅದರಲ್ಲಿ ಎರಡು ಭಾಗ ಇದೆ ಒಂದು ಭಾಗ ಗೃಹನಿರ್ಮಾಣ ಸಂಸ್ಥೆಗೆ ಸಂಬಂಧಪಟ್ಟಿರುವುದು. ಅದು ನನಗೆ ನೇರವಾಗಿ ಸಂಬಂಧಪಟ್ಟಿದ್ದು ಇನ್ನೊಂದು ಅಸೋಸಿಯೇಷನ್, ಅದು ನನಗೆ ಸಂಬಂಧವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಆ ಅಸೋಸಿಯೇಷನ್ ಏನಿತ್ತು ಆ ಅಸೋಸಿಯೇಷನ್ ಮುಖಾಂತರ ಕನ್‌ವರ್ಷನ್, ಹೌಸ್ ಡಿಸ್ಟ್ರಿಬ್ಯೂಷನ್ ಮಾಡುವುದಕ್ಕೆ ಬೈಲಾ ಇಲ್ಲ ಎಂದು ಹೇಳಿದ್ದೀರಿ ಅದು ಗೊತ್ತಾದ ಮೇಲೆ they have formed a co-operative society under the Act of 1974. ತಾವು ಹೇಳಿದ್ದು ನಿಜ. ಕೊ-ಅಪರೇಟೀವ್ ಸೊಸೈಟಿ ಮಾಡಿಕೊಳ್ಳುವ ಮುಖೇನ ಲಯಬಿಲಿಟೀಸ್‌ನ್ನು, ಅಸೆಟ್ಸ್‌ನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಮ್ಮ ಸರ್ಕಾರ ಒಂದು ಕಡೆ ಒಂದು ರೀತಿ ಇನ್ನೊಂದು ಕಡೆ ಇನ್ನೊಂದು ರೀತಿ ಮಾಡುವುದು ಬೇಡ ನಾನು ನಿಮ್ಮ ಬಗ್ಗೆ ದೋಷ ಕೊಡಲಿಕ್ಕೆ ಹೋಗುತ್ತಾ ಇಲ್ಲ. ಇದರ ಬಗ್ಗೆ ನಾನು ಪರ್ಸನಲ್ ಆಗಿ ನೋಡುವುದಕ್ಕೆ ಹೋದೆ. I do not want to jump to conclusions ನಿಮ್ಮಿಂದ information elicit ಮಾಡಿ then we will form our own opinion ಎಷ್ಟು ಹಣವನ್ನು ವೆಚ್ಚಮಾಡಿರುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ನಾನು ಅವರ ಪರವಾಗಿ ವಕಾಲತ್ತು ತೆಗೆದುಕೊಂಡಿಲ್ಲ. ಇನ್ನೊಂದು ಕಡೆ ಅಕ್ರಮ ನಡೆದಿದೆ. ಅದಕ್ಕೆ ಸರ್ಕಾರದ ಸಹಾನುಭೂತಿ ಇದೆ ಅದಕ್ಕೆ ಮಂತ್ರಿಗಳು ಸಂಬಂಧಪಟ್ಟವರಲ್ಲ. ಅದಕ್ಕೆ ಬೇರೆ ಶಕ್ತಿಗಳಿದ್ದಾರೆ. ಅವರು ಈ ಮನೆಯ ಸದಸ್ಯರಲ್ಲವೇ ಇರುವುದರಿಂದ ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅವರಿಗೆ 30 (ಎ) ಬರಲಿಲ್ಲ ಅವರಿಗೆ ಖಾಸಾ ಇಲ್ಲ, ಏನೂ ಇಲ್ಲ. ಅವರ ಮೇಲೆ ಖಾಸಾ ಹಾಕಬೇಕಾಗಿತ್ತು. ಅದು 28 ಲಕ್ಷ ರೂಪಾಯಿಗಳಿಗೆ ಸಂಬಂಧಪಟ್ಟಿದ್ದು, 28 ಲಕ್ಷ ರೂಪಾಯಿಯ ವರ್ಕ್ಸ್ ನಡೆದಿದೆ ಎಂದು ಅವರು ಹೇಳುತ್ತಾರೆ. All these things have to be looked into. They have deposited Rs, 6.14 lakhs with CITB and refunded Rs 14 lakhs. ನಿಮ್ಮ ಅಡ್ಮಿನಿಸ್ಟ್ರೇಟರ್ ತೆಗೆದುಕೊಂಡಾಗ ಏನು ವರದಿ ಕೊಟ್ಟಿದ್ದಾರೆ ಎನ್ನುವುದನ್ನು ಸಭೆಗೆ ತಿಳಿಸಬೇಕು.

ಶ್ರೀ ಕೆ. ಎಚ್. ರಂಗನಾಥ್.—ನಾನು ಆ ಗೃಹನಿರ್ಮಾಣ ಸಂಘ ಸೊಸೈಟಿಗೆ ಸಂಬಂಧಪಟ್ಟಂತೆ 11 ಲಕ್ಷ ರೂಪಾಯಿಗಳ ಅವ್ಯವಹಾರ ಆಗಿದೆ ಎನ್ನುವ ಬಗ್ಗೆ ಹೇಳುತ್ತಿದ್ದೆ ಮಾನ್ಯ ಸದಸ್ಯರು ಈಗ ಸಿವಿಲ್ ವರ್ಕ್ಸ್ ಬಗ್ಗೆ ಏನು ಕೇಳುತ್ತಿದ್ದಾರೋ ಆ ಐಟಂ ನನ್ನಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಅಧಿಕಾರಿಗಳು ಕೊಡತಕ್ಕ ವರದಿಯ ಮೇಲೆ ಡಿಪೆಂಡ್ ಆಗಬೇಕಾಗಿದೆ. ಏಕೆಂದರೆ ಸೊಸೈಟಿ ರೂಲ್ಸಿನ ಸೆಕ್ಷನ್ 30 ರ ಪ್ರಕಾರ ಇದನ್ನು ತೆಗೆದುಕೊಳ್ಳುವಾಗ ಅಧಿಕಾರಿಗಳು ಮಂತ್ರಿಗಳ ಮೂಲಕ ಅದರ ಒಂದು ಸ್ಪಷ್ಟ ಚಿತ್ರವನ್ನು ಈ ಸಭೆಯ ಮುಂದೆ ಇಡಬೇಕಾಗುತ್ತದೆ. ಆದ್ದರಿಂದ ಅದರ ಬಗ್ಗೆ ನಾನು ಬಹಳ ಎಚ್ಚರಿಕೆಯಿಂದ ಇಲ್ಲಿ ಹೇಳುತ್ತಿದ್ದೇನೆ ಈ ಮಂತ್ರಿಗಳಲ್ಲದೆ ಇನ್ನು ಬೇರೆ ಯಾರಾದರೂ ಆಗಿದ್ದರೆ ನಾನು ಈ ವಿಚಾರವನ್ನು ಬೇರೆ ರೀತಿಯಲ್ಲಿ ಅಟಾಕ್ ಮಾಡತಕ್ಕ ವಿಧಾನವನ್ನು ಅಡಾಪ್ಟ್ ಮಾಡುತ್ತಿದ್ದೆ ಅವರು ಅಲ್ಲಿ 28 ಲಕ್ಷ ರೂಪಾಯಿಗಳನ್ನು ಸಿವಿಲ್ ವರ್ಕ್ಸ್‌ಗಾಗಿ ಖರ್ಚು ಮಾಡಿದ್ದಾರೆ. ಮಾನ್ಯ ಸಭಾಧ್ಯಕ್ಷರು, ತಾವೇ ಖುದ್ದಾಗಿ ಬಂದು ಅಲ್ಲಿ ನೋಡಬಹುದು. ಮೊನ್ನೆ ನಾವು ಅದನ್ನು ನೋಡಿದ್ದೇವೆ. 6 ಲಕ್ಷವೋ ಅಥವಾ 4 ಲಕ್ಷವೋ ? ಸಂಬಂಧಪಟ್ಟ ಅಧಿಕಾರಿಗಳನ್ನು ಇದರಲ್ಲಿ ಫೇಸ್‌ಲೈಜ್ ಮಾಡಬೇಕಾಗುತ್ತದೆ. ಆದ್ದರಿಂದ ಅಧಿಕಾರಿಗಳಾಗಿರುವವರು ಕೆಲವು ವಿಷಯಗಳನ್ನು ಮುಚ್ಚಿ ಅವರಿಗೆ ಬೇಕಾದಂತೆ ವರದಿ ಕೊಡುವುದು ಸರಿಯಲ್ಲ ಇನ್ನೂ 2 3 ನಿಜ ಇಲ್ಲದೇ ಇರಬಹುದು. ಫ್ಯಾಕ್ಚುಯಲ್ ಪೊಜಿಷನ್ ಸರಿಯಾಗಿ ಇಲ್ಲಿ ಕೊಡದೆ ಹೋದರೆ The officers are responsible to keep the Government in darkness which is wrong. ನಿಮ್ಮ ಅಧಿಕಾರಿಗಳ ರಿಪೋರ್ಟ್ ಪ್ರಕಾರ ಅಲ್ಲಿ 86 ಲಕ್ಷ ರೂಪಾಯಿಗಳು ಫ್ರಾಡ್ ಆಗಿದೆ ಎಂದು ಹೇಳುವುದು ಸರಿಯಾದುದಲ್ಲ. ಆಡಿಟ್ ಮಾಡುವಾಗ ಸರಿಯಾದ ವಿಚಾರಗಳನ್ನು ಅವರ ಮುಂದೆ ಇಡಬೇಕು. There is no meaning in it.

ಶ್ರೀ ಕೆ. ಎಚ್ ರಂಗನಾಥ್.—86 ಲಕ್ಷ ರೂಪಾಯಿಗಳು ಅಲ್ಲಿ ಫ್ರಾಡಾಗಿದೆ ಎಂದು ಹೇಳಿದರೆ ಅದು ಸರಿಯಲ್ಲ. ಅಲ್ಲಿ ಒಟ್ಟು ಇನ್ವಾಲ್ವ್ ಆಗಿರುವುದು ಕೇವಲ 36 ಲಕ್ಷ ರೂಪಾಯಿಗಳು ಮಾತ್ರ. ಅದರಲ್ಲಿ ಇದನ್ನು ಕಳೆದರೆ ಬಾಕಿ 50 ಲಕ್ಷ ರೂಪಾಯಿಗಳು ಮಾತ್ರ ಹಾಗೆಯೇ ಇದೆ.

ಶ್ರೀ ಎಚ್. ಡಿ. ದೇವೇಗೌಡ —ನೀವು ಬೇಕಾದರೆ ಸರ್‌ಪ್ರೈಜ್ ವಿಜಿಟ್ ಮಾಡಿ, ಅಲ್ಲಿಗೆ ಪುನಃ ನಮ್ಮನ್ನು ಕರೆದುಕೊಂಡು ಹೋಗಬೇಡಿ. ಮೈಕೋನಲ್ಲಿ 60-70 ಲಕ್ಷ ರೂಪಾಯಿಗಳ ಅವ್ಯವಹಾರ, ದುರ್ವ್ಯವಹಾರ ನಡೆದಾಗ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ? ಅಲ್ಲಿ ಫಾರ್ಮೇಷನ್ನೇ ಆಗಿಲ್ಲ. ಇಲ್ಲಿ ಸುಂದರವಾದ ಲೇಔಟ್ ಮಾಡಿದ್ದಾರೆ. ಅದರಲ್ಲಿಯೇ 60-70 ಲಕ್ಷ ರೂಪಾಯಿಗಳ ಇನ್ವಾಲ್‌ಮೆಂಟ್ ಇದೆ. ಅದರ ಬಗ್ಗೆ ಮೀಸಾ ಮತ್ತೊಂದು ಮೊಗದಿಂದ ಇಲ್ಲ, ಬಚ್ಚರ ವ್ಯವಹಾರದಲ್ಲಿ ಹಣ ಖರ್ಚು ಮಾಡಿದ್ದಾರೆ. ಸಿ. ಐ. ಟಿ. ಬಿ. ಗೆ ಬೇರೆ ಡಿಪಾಜಿಟ್ ಮಾಡಿದ್ದಾರೆ. ನೀರಿನ ಸೌಕರ್ಯಕ್ಕಾಗಿ 86 ಲಕ್ಷ ರೂಪಾಯಿಗಳನ್ನು ಮಾಡಿದ್ದಾರೆ. ಆದರೂ ಅಲ್ಲಿ ಕೆಲವು ಅಕ್ರಮಗಳು ನಡೆದಿರಬಹುದು. ಆದರೆ ಅಲ್ಲಿ ಉಗ್ರವಾದ ಕ್ರಮ ತೆಗೆದುಕೊಂಡು ತಪ್ಪಿತಸ್ಥರನ್ನು ಮೀಸಾ ಮೇಲೆ ಹಾಕಿ. ಅಲ್ಲಿನ ಅಧಿಕಾರಿಗಳ ಬಗ್ಗೆಯೂ ಇದುವರೆಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಈ ವಿಚಾರದಲ್ಲಿ ನಿನ್ನೆ ಭಾಷಣ ಮಾಡುವುದಕ್ಕೆ ಸಾಕಷ್ಟು ಕಾಲಾವಕಾಶ ಸಿಗಲಿಲ್ಲ. ಮಾನ್ಯ ಶ್ರೀ ರಂಗನಾಥ್‌ರವರು ಈ ವಿಚಾರದಲ್ಲಿ ಹೆಚ್ಚಿನ ಗಮನ ಕೊಡುತ್ತಾ ಇರುವುದರಿಂದ ಇಂತಹ ಅಕ್ರಮಗಳನ್ನು ಕೂಡಲೆ ತಪ್ಪಿಸುತ್ತಾರೆಂದು ನಾನು ಭಾವಿಸಿದ್ದೇನೆ. ರಾಜ್ಯಮಟ್ಟದ ಸಂಸ್ಥೆಗಳಲ್ಲಾಗಲೀ, ಅಥವಾ ಜಿಲ್ಲಾ ಮಟ್ಟದ ಸಂಸ್ಥೆಗಳಲ್ಲಾಗಲೀ, ಅಥವಾ ತಾಲ್ಲೂಕು ಮಟ್ಟದ ಸಂಸ್ಥೆಗಳಲ್ಲಾಗಲೀ ಇಂತಹ ಅವ್ಯವಹಾರಗಳು, ನಡೆದಿದ್ದರೆ ಅಂಥಾದ್ದಕ್ಕೆ ಅಧಿಕಾರಿಗಳೂ ಕೂಡ ಪಾಲುದಾರರಾಗಿರುತ್ತಾರೆ. ಮಾರ್ಕೆಟಿಂಗ್ ಫೆಡರೇಷನ್ನಿನಲ್ಲಿ ಸೊಸೈಟಿಗಳ ರಿಜಿಸ್ಟ್ರಾರ್‌ರವರು ಸರ್ಕಾರದ ನಾಮಿನಿಯಾಗಿರುತ್ತಾರೆ. ಅಂತಹ ಸಂಸ್ಥೆಗಳಲ್ಲಿ ಡೈರೆಕ್ಟರ್ಸ್ ಕುಳಿತು ಕೆಲಸ ಮಾಡುವಾಗ ಒಂದೂವರೆ ಕೋಟಿ ರೂಪಾಯಿಗಳು ಅಕ್ರಮ ನಡೆಸಿದ್ದರೂ ಯಾವ ಯಾವ ರಿಜಿಸ್ಟ್ರಾರ್‌ಮೇಲೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ? ಅಂತಹವರನ್ನು ಮೊದಲು ಮೀಸಾ ಮೇಲೆ ಬಂಧಿಸಬೇಕು. They are responsible for all these things, ಇದರ ಚರಿತ್ರೆ ಇನ್ನೂ ಬೇಕಾದಷ್ಟು ಇರುವುದರಿಂದ, ಈ ವಿಚಾರದಲ್ಲಿ ಇನ್ನೂ ಚೆನ್ನಾಗಿ ತಿಳಿದುಕೊಳ್ಳಬೇಕಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ನಾನು ಇಲ್ಲಿ ಒಂದು ಮನವಿಮಾಡಿಕೊಂಡಿದ್ದೇನೆ. ಯಾವುದೋ ಇನ್ನೊಂದು ಸೊಸೈಟಿಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದಿರುವಾಗ ಅಷ್ಟರೊಳಗೆ ಒಂದು ಕ್ರಿಮಿನಲ್ ಕೇಸ್ ಆ ಸೊಸೈಟಿಯ ಮೇಲೆ ಇದ್ದುದರಿಂದ ಇದರ ಬಗ್ಗೆ ಏನೂ ಮಾಡಲಿಕ್ಕಾಗಲಿಲ್ಲ. ಕೇವಲ ಮೀಸಾ ರೂಲ್ಸನ್ನು ಇದಕ್ಕೆ ಅನ್ವಯ ಮಾಡಬೇಕೆಂದಲ್ಲ. ಅದಕ್ಕೆ ಮುಂಚೆ ಇದು ನನ್ನ ಗಮನಕ್ಕೆ ಬಂದಿದ್ದರಿಂದ ಅದರ ಬಗ್ಗೆ ಆ ರೀತಿ ಕ್ರಮ ತೆಗೆದುಕೊಳ್ಳಬೇಕಾಯಿತು. ಅದರ ಬಗ್ಗೆ ಆಡಿಟ್ ವರದಿ ಬೇರೆ ಇದೆ. ಅವೆಲ್ಲವನ್ನೂ ಇಲ್ಲಿ ಹೇಳುವುದಕ್ಕೆ ಸಮಯ ಹೆಚ್ಚಾಗಬಹುದೇನೋ ಗೊತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ - ಇದು ಬಹಳ ಮುಖ್ಯವಾದ ವಿಷಯ. ಯಾವಾಗಲೂ ಆಡಿಟ್ ಮಾಡಬೇಕಾದರೆ ವೋಚರ್ಸ್, ಅಕೌಂಟ್ಸ್ ವೆರಿಫೈ ಮಾಡಲೇ ಬೇಕು. ಜೊತೆಗೆ ಸಿ. ಓ. ಡಿ. ಗೆ ಕಳುಹಿಸಿ ಅಲ್ಲಿನ ಇಂಜಿನಿಯರ್‌ಗಳ ಮೂಲಕ ಮೆಜರ್‌ಮೆಂಟ್ ಮಾಡಲಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾರ್ಕೆಟಿಂಗ್ ಫೆಡರೇಷನ್ನಿನಲ್ಲಿ ಇಂತಹ ಅವ್ಯವಹಾರಕ್ಕೆ ಒಳಗಾಗಿದ್ದಂತಹವರನ್ನು ಮಂತ್ರಿಯಾಗಿ ಬೇರೆ ಮಾಡಿಕೊಂಡಿದ್ದೀರಿ. ಆ ಭಟ್ಟರಿಗಿಂತ ಇವರನ್ನೂ ದೊಡ್ಡ ಭಟ್ಟರಾಗಿ ಇದ್ದಾರೆ. ನೀವು ಇನ್ನೂ ಅಂತಹ ಫೆಡರೇಷನ್ ನೋಡಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಅದನ್ನೀಗ ನಾವೂ ನೀವೂ ಇಬ್ಬರೂ ನೋಡಬೇಕು. ಆದರೆ ಅಷ್ಟರೊಳಗೆ ಕಮಿಷನ್ ರಚನೆ ಮಾಡಿ ಇದನ್ನು ಅದಕ್ಕೆ ರೆಫರ್ ಮಾಡಿರುವುದರಿಂದ ಇನ್ನೂ ನಾನು ಅದನ್ನು ನೋಡಿಲ್ಲ. ಆದರೂ ನಾನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ವರದಿಯನ್ನು ಪೂರ್ತಿಯಾಗಿ ಓದಿದ್ದೇನೆ

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮಂತ್ರಿಗಳು ಇದನ್ನು ಕಳೆದ ಒಂದೂವರೆ ವರ್ಷದಿಂದ ನೋಡಿಲ್ಲವೆಂದು ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ಆ ವಿಚಾರವನ್ನು ಅವರು ಈ ಸಭೆಗೆ ತಿಳಿಸಬೇಕು

ಶ್ರೀ ಕೆ. ಎಚ್. ರಂಗನಾಥ್.—ಅದನ್ನು ಇಲ್ಲಿ ಹೇಳುವ ಸಮಯಕ್ಕೆ ಸರಿಯಾಗಿ ಈ ಕಮಿಷನ್ ಬಂದಿದೆ. ಇಲ್ಲದಿದ್ದರೆ ಎಲ್ಲ ವಿಚಾರವನ್ನು ಹೇಳುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಳೆದ ಸಾರಿಯೇ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆವು. ಕಮಿಷನ್ ರಚನೆಯಾಗಿ ಕೇವಲ ಮೂರು-ನಾಲ್ಕು ತಿಂಗಳಾದುವು. ಇನ್ನುಳಿದ ಸುಮಾರು 9 ತಿಂಗಳ ಅವಧಿಯಲ್ಲಿ ಹಿಂದೆ ಬೇಡಿಕೆಗಳನ್ನು ಪ್ರಸ್ತಾಪ ಮಾಡುತ್ತಿದ್ದ ಸಮಯದಲ್ಲಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ವರದಿಯ ಪ್ರಕಾರ ಇದುವರೆಗೆ ಇದರ ಬಗ್ಗೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ ?

SRI K. H. RANGANATH.—I don't have any interest either in Bhat or Mills; ಮಾನ್ಯ ವಿರೋಧ ಪಕ್ಷದ ನಾಯಕರು ಈಗ 28 ಲಕ್ಷ ರೂಪಾಯಿಗಳು ಎಂದು ಬೇರೆ ಹೇಳುತ್ತಿದ್ದಾರೆ. ಅದನ್ನು ತರಿಸಿ ಐಟಂವೈಸ್ ಬೇಕಾದರೆ ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮಗೆ ಭಟ್‌ರಲ್ಲಿ ಇಂಟರೆಸ್ಟ್ ಇಲ್ಲದೇ ಇರಬಹುದು. ಆದರೆ ಭಟ್ಟರಂತಹ ಬಕರು ಬೇರೆ ಬೇರೆ ಕಡೆ ಇಂತಹ ಕೆಲಸಗಳನ್ನು ಮಾಡುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮೈಕೋನಲ್ಲಿ 71 ಲಕ್ಷ ರೂಪಾಯಿಗಳಷ್ಟು ಅವ್ಯವಹಾರ ನಡೆದಿದೆ. ಅದು ಯಾವ ರೀತಿ ಖರ್ಚಾಗಿದೆಯೆಂಬುದನ್ನು ಹೇಳಬೇಕು

ಶ್ರೀ ಕೆ. ಎಚ್. ರಂಗನಾಥ್.—ಆ ರೀತಿ ಖರ್ಚಾಗಿಲ್ಲ. ಅಷ್ಟು ಖರ್ಚಾಗಿದೆಯೆಂದು ಯಾರು ಹೇಳಿದರು ? ನಾನು ಎಲ್ಲ ವಿಷಯಗಳನ್ನು ಈ ಸಭೆಯ ಮುಂದೆ ಹೇಳುತ್ತಿದ್ದೆ. ಅಷ್ಟರೊಳಗೆ ಇವರಿಗೆ ಅವಸರ. ಈ ಬಗ್ಗೆ ಇನ್ನೂ ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಕ್ಕೆ ನಾನು ಇಷ್ಟಪಡುವುದಿಲ್ಲ.

Site deposits taken from members to the tune of Rs. 10,95 552 were not accounted in the books of the society, resulting in concealment and suppression of funds. Investment of funds was made in Commercial Bank without approval. The General body meeting was not held violating the provision of section 27 of K. C. S. Act. Heavy amount received from the employees of the Factory like HAL., BEL., ITI, etc., from out of their Provident Fund were deliberately not accounted in the books of the society and the Hon'ble Secretary adopted a dubious method of cheating the factory and the employees by issuing to factory sites alloment letters with the intension of securing provident fund loan to the members from the factory. Allotment of one and same sites to different persons was done with deliberate intensions. There were several instances of Bogus debits, unauthorised expenditure, mismanagement of Funds, and it was revealed that a sum of Rs 86,00,000 was involved in such transactions relating to the Co-operative Society. The total extent of land purchased by the AKYWAA' is 113 acres and 31-1/4 guntas and amount paid as per registered documents is Rs. 9 88,650 involving 53 sale deeds According to the Audit Report of the Special Auditor. Tumkur it is observed that a sum of Rs 11,41 363 64 is involved in misappropriation for which the Ex. Secretary has been made responsible and this amount has been shown as recoverable. Further a sum of Rs 55,450.53 is also assed against him for recovery for the period from 3-7-1975 to 25-8-1976.

ಮಾನ್ಯ ಅಧ್ಯಕ್ಷರೇ, 35 ಲಕ್ಷ ರೂಪಾಯಿ ಸಿವಿಲ್ ವರ್ಕ್ಸ್ ಬಗ್ಗೆ ಏನು ಕೇಳುತ್ತಿದ್ದಾರೆ ಅದನ್ನು ನಾನು 6 ಲಕ್ಷ ರೂಪಾಯಿ ಎಂದು ಹೇಳಿದೆ. ಆಡಿಟ್ ರಿಪೋರ್ಟ್ ನನ್ನ ಹತ್ತಿರ ಇದೆ; ಅದರ ಬಗ್ಗೆ ತದನಂತರ ಐಟಮ್‌ವೈಸ್ ವಿವರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

2-30 P. M.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯವರೇ, ಮಾನ್ಯ ಮಂತ್ರಿಗಳನ್ನು ನಾನು ಕೇಳುವುದು ವೈಕೋ ಬಗ್ಗೆ ಯಾರು ಯಾರು ಏನು ಖರ್ಚು ಮಾಡಿದ್ದಾರೆ ಅದನ್ನು ದಯಮಾಡಿ ಮಂತ್ರಿಗಳು ಅಧಿಕೃತವಾಗಿ ತಿಳಿಸಲಿ.

ಶ್ರೀ ಸಿ. ಬೈರೇಗೌಡ.—ಒಬ್ಬ ಮಂತ್ರಿಗಳು ಸಿಲ್ಕ್ ಬಗ್ಗೆ ವಿವರವಾದ ಹೇಳಿಕೆ ಕೊಟ್ಟಿದಾರೆ. ಅದು ರೈತರಿಗೆ ಸಂಬಂಧಪಟ್ಟಂಥಾದ್ದು. ಆದ್ದರಿಂದ ದಯಮಾಡಿ ಈ ವಿಷಯವನ್ನು ಮಂತ್ರಿಗಳೇ ಹೇಳಿರುವುದರಿಂದ ಅಲ್ಲಿ ಏನು ಅವ್ಯವಹಾರ ನಡೆದಿದೆ ಅದರ ಬಗ್ಗೆ ಕೂಡ ಮಂತ್ರಿಗಳು ತಿಳಿಸಬೇಕು ?

ಶ್ರೀ ಕೆ. ಎಚ್. ರಂಗನಾಥ್.—ತಾವುಗಳೆಲ್ಲಾ ಸಾವಧಾನವಾಗಿ ಇದ್ದರೆ ನಾನು ಉತ್ತರ ಹೇಳುವುದಕ್ಕೆ ಅನುಕೂಲವಾಗುತ್ತದೆ, ಇಲ್ಲದೆ ಹೋದರೆ ತಮಗೂ ಸರಿಯಾದ ಉತ್ತರ ಸಿಕ್ಕುವುದಕ್ಕೆ ತೊಂದರೆಯಾಗುತ್ತದೆ. ಇನ್ನು ೨೮ ಲಕ್ಷ ರೂಪಾಯಿ ಸಿವಿಲ್ ವರ್ಕ್ಸ್ ಕೆಲಸದ ಬಗ್ಗೆ ವಿವರ ಕೊಡುತ್ತೇನೆ. ಗೃಹನಿರ್ಮಾಣ ಸೊಸೈಟಿಗೆ ಸಂಬಂಧಪಟ್ಟಂತೆ ರೈಟರ್ಸ್ ಅಂಡ್ ಆರ್ಟಿಸ್ಟ್ ಅಸೋಸಿಯೇಷನ್ ಬಗ್ಗೆಯೂ ವಿವರ ಕೊಡುತ್ತೇನೆ.

Amount misappropriated for which the ex-Secretary is held responsible.

1.	Rs. 4 200 transferred to the Association on 1-10-1975 by the society is not accounted in the accounts of the Association.	4,200-00
2.	Rs. 7 000 transferred on 15-9-1975 and Rs. 19,900 on 17-12-1975 by the Society have not been accounted by the Association.	26,900-00
3.	Amounts collected towards share capital on 2-1-1976 not accounted.	203-24
4.	Closing cash balance as on 1-10-1975 not accounted while opening new cash book from 5-4-1976.	113-86
5.	False debits towards layout work without acknowledgements.	4,515-74
6.	False debit towards salary of Clerk without voucher	100-00
7.	False debit made in the name of the village Accounts and Shanbogues of Avalahalli and Hosakere villages without voucher.	3,900-00
8.	False debit towards purchase of cement and car hire without bill or voucher.	103-75
9.	Amount drawn by self-cheque on 26-6-1976 not accounted in Cash Book.	175-00
10.	Receipts not accounted in the accounts of the Society.	10,95,552-05
11.	False debit made for layout work with signature forged.	5,600-00
	Total	11,41,363-64

THE ALL KARNATAKA YOUNG WRITERS AND ARTISTS' ASSOCIATION, BASAVANAGUDI, BANGALORE-4,

Particulars	Amount held under objection	Amount proposed for recovery
		Rs.
Receipts not accounted	...	31,296-57
Conversion charges	...	75,000-00
Land acquisition charges and Compensation	...	20,09,993-55
Consultation fee	...	72,157-33
Scrutiny fee	...	4,650-00
Works (Excess payments)	...	11,27,707-66
General expenditure not covered by vouchers	...	1,63,063-38
Refund of deposits	9,19,338-59	...
Excess payment to A.G. Rangaswamy	...	42,840-00
Amt. drawn by self cheques not accounted	...	41,288-31
Amt. stated to be remitted to bank but not credited	...	62,234-80
Amt. drawn by self-cheques for which accounts not produced	2,60,596-93	...
Debt balances under land advances to be recoverable	...	2,45,234-80
Vouchers not made available for audit	26,650-00	...
Amt. transferred by bank from one account to another account but charged off in the cash book as layout expenses	33,549-00	...
Amt. drawn by self cheques but not accounted in the cash book.	...	29,000-00
	12,40,134-57	38,32,893-27

1,	Excess payment made to Sri Raghavendra Enterprises	41,94,160-13
2.	Payment to be made towards layout charges to the Bangalore Development Authority due to lapse on the part of the previous Board	22,40,000-00
3.	Interest and penal interest paid to Karnataka State Co-op-Housing Corporation on account of loan	3,75 302-31
4.	Advance paid to coconut plants to Sakkarai Nursery	5,000·00
5.	Interest paid on fixed deposit	2 85,251-00
6.	Amount receipt from P. F. Commissioner on 20-9-1973 not brought into cash book by the ex-Secretary	13,600-00
		71,13,313-44

ನಾನು ಆಗಲೇ ಹೇಳಿದ ಹಾಗೆ Land advances given to Raghavendra Enterprises right from 15th April 1971 are as shown below :—

Land advances paid	...	55,87,330
Stamp paper purchases	...	69,688
Lay out advance	...	5,01,130
Supervision charges paid to C.I.T.B.	...	42.106

ಒಟ್ಟು 62,40,255 ರೂಪಾಯಿಗಳು ಆತನಿಗೆ ಅಡ್ವಾನ್ಸ್ ರೂಪದಲ್ಲಿ ಕೊಟ್ಟಿರತಕ್ಕದ್ದಾಗಿದೆ ರಾಘವೇಂದ್ರ ಎಂಟರ್‌ಪ್ರೈಸಸ್ಸಿನ ಪಾರ್ಟ್‌ನರ್ಸ್ 5 ಜನರಿದ್ದಾರೆ —(1) ಸಿ ಆರ್. ರಮೇಶ್, (2) ಟಿ. ಕೆ. ವಿ. ಮೂರ್ತಿ, (3) ಎಂ. ಡಿ. ಕೆ. ಆನಂದಪಾಲ, (4) ಎಂ. ಗೋಪಾಲಕೃಷ್ಣ ಮತ್ತು (5) ಕೆ. ಪಿ. ಕಾವೇರಿ. ಅಧ್ಯಕ್ಷರೇ, ಈ ಅವ್ಯವಹಾರಗಳ ಬಗ್ಗೆ ಸಿವಿಲ್ ಮತ್ತು ಕ್ರಿಮಿನಲ್ ಕೇಸಸ್ ಹಾಕಿದ್ದೇವೆ. ಇಲ್ಲಿರತಕ್ಕ ಆಸ್ತಿಗಳನ್ನು ಅಟ್ಯಾಚ್‌ಮೆಂಟ್ ಬಿಫೋರ್ ಜಡ್ಜ್‌ಮೆಂಟ್ ಮಾಡಿದ್ದಕ್ಕೆ ಕೋರ್ಟಿಗೆ ಹೋಗಿ ಅದು ವೆಕೇಟ್ ಆಗಿದೆ ಎಂದು ವರದಿ ಬಂದಿದೆ. ಆದನ್ನೆಲ್ಲ ನಾವು ನೋಡಬೇಕಾಗುತ್ತದೆ. ಇನ್ನು ಮದ್ರಾಸಿನಲ್ಲಿ ಕೆಲವು ಆಸ್ತಿಗಳಿವೆ ಎಂದು ನಾನು ಕೇಳಿದ್ದೇನೆ. ಆದರೆ ಮದ್ರಾಸ್‌ನಲ್ಲಿರತಕ್ಕದ್ದನ್ನು ಹೇಗೆ ಅಟ್ಯಾಚ್‌ಮೆಂಟ್ ಮಾಡುವುದು ಎಂದು ವಿಚಾರಿಸುತ್ತಿದ್ದೇವೆ. ಸಿವಿಲ್ ಕೋರ್ಟಿನಲ್ಲಿ ಆಗಿದ್ದರೆ ಅಲ್ಲಿರತಕ್ಕ ಸಿವಿಲ್ ಕೋರ್ಟಿನಲ್ಲಿ ಕೇಳಿ ಮಾಡುವುದಕ್ಕೆ ಬರುತ್ತದೆ. ಆದರೆ ಕೋ-ಆಪರೇಟಿವ್‌ನಲ್ಲಿರುವುದರಿಂದ ಮಾಡುವುದಕ್ಕೆ ಬರುವುದಿಲ್ಲ. ಅಲ್ಲಿದ್ದಂತಹ ಬೇರೆ ಸದಸ್ಯರಿಂದ ಡಿಪಾಸಿಟ್ ತೆಗೆದುಕೊಂಡು 12 ಪರ್ಸೆಂಟ್ ಬಡ್ಡಿ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಬ್ಯಾಂಕಿಂಗ್ ಆಕ್ಟಿವಿಟೀಸ್‌ನಲ್ಲೂ ಅವ್ಯವಹಾರ ಇದೆ.

ಶ್ರೀ ಎಚ್ ಡಿ. ದೇವೇಗೌಡ —ಬೆಂಗಳೂರು ಸುತ್ತಮುತ್ತ ಬಹಳಷ್ಟು ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿಗಳು ಹುಟ್ಟಿವೆ. ಅವುಗಳಲ್ಲಿ ಲಕ್ಷಗಟ್ಟಲೆ ಅವ್ಯವಹಾರ ನಡೆದಿದೆ, ಒಮ್ಮೆ ಕೈ ಹಾಕಿದರೆ ಎಲ್ಲ ಸಿಗುತ್ತದೆ. ಮಾನ್ಯ ಸಚಿವರು ಪ್ರಯತ್ನಿಸಿದರೂ ಅವರಿಗೆ ಸಿಗುತ್ತಿಲ್ಲ. ಇನ್‌ಫಾರ್ಮೇಷನ್ ಡಿಪಾರ್ಟ್‌ಮೆಂಟಿನಲ್ಲೂ ಪೂರ್ಣ ವಿವರ ಸಿಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯ ದಿವಸ ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಿದ್ದಾಗ ಬೇಜವಾಬ್ದಾರಿ

ಅಪಾದನೆ ಮಾಡಬಾರದೆಂಬ ಒಂದು ಮಾತನ್ನು ಹೇಳಿದರು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ವಿರೋಧ ಪಕ್ಷದ ವತಿಯಿಂದ ಯಾವುದೇ ಮಾತನಾಡಿದರು ಅದನ್ನು ಪುಷ್ಟಿಕರಿಸುವ ಶಕ್ತಿ ಇರಬೇಕು. ಒಂದು ಕನ್‌ವರ್ಷನ್ ಸರ್ಟಿಫಿಕೇಟ್ ಪಡೆಯುವುದಕ್ಕಾಗಲೀ ಅಥವಾ ಒಂದು ನೋ ಅಬ್ಜಕ್ಷನ್ ಸರ್ಟಿಫಿಕೇಟ್ ಪಡೆಯುವುದಕ್ಕಾಗಲೀ ಏನೇನು ಮಾಡಬೇಕೆಂಬುದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಬಹಳಷ್ಟು ತೀರ್ಥಯಾತ್ರೆ ಮಾಡಬೇಕಾಗುತ್ತದೆ. How many lakhs of rupees and from which hand to which hand it was transferred all these things will have to be probbed. ತಮಗೆ ಎಷ್ಟು ಹಿಡಿಯುವುದಕ್ಕೆ ಸಾಧ್ಯವೋ ಅಷ್ಟನ್ನು ಹಿಡಿಯುವುದಕ್ಕೆ ಪ್ರಯತ್ನಮಾಡಿ.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ. ಇವತ್ತು ಮಾನ್ಯ ಸಚಿವರ ಹೇಳಿಕೆ ನನ್ನ ಕ್ಷೇತ್ರದಲ್ಲಿರುವ ಸೊಸೈಟಿಗೆ ಸಂಬಂಧಪಟ್ಟ ಹಾಗೆ ಶುರುವಾಯಿತು. ನನ್ನ ಅಳಿಯ ಅಂದರೆ ನನ್ನ ಅಕ್ಕನ ಮಗ ಆ ಸೊಸೈಟಿಗೆ ದುಡ್ಡು ಹಾಕಿದ್ದಾನೆ. ಆ ವಿಚಾರವೆಲ್ಲ ಗೊತ್ತಿದ್ದರು ಆ ಮಧ್ಯೆ ನನ್ನನ್ನು ಎಲ್ಲಿ ಸಿಕ್ಕಿ ಹಾಕಿಸುತ್ತಾರೋ ಎಂದು ನಾನು ದೂರದಲ್ಲಿ ಇದ್ದೆ. ಕನ್‌ವರ್ಷನ್ ಮಾಡುವುದಕ್ಕೆ ಬೇಕಾದಷ್ಟು ದುಡ್ಡು ಕೊಟ್ಟಿದೆ. ಆದ್ದರಿಂದ.........

ಶ್ರೀ ಕೆ. ಎಚ್. ರಂಗನಾಥ್.—ಆ ಎಲ್ಲ ವಿಚಾರಕ್ಕೆ ಹೋಗತಕ್ಕದು ಸರಿಯಲ್ಲ ಕೋರ್ಟ್ ಮುಂದೆ ಕೇಸ್ ಇದೆ. Under the Civil Procedure Code whatever we say here becomes a piece of evidence in the Cout of Law ಅದು ಸಿ.ಓ.ಡಿ, ನಲ್ಲಿ ಇನ್‌ವೆಸ್ಟಿಗೇಷನ್ ಆಗುತ್ತಿದೆ. ಕೆಲವು ಕೇಸುಗಳು ಅಲ್ಲಿರುವುದರಿಂದ ಹೆಚ್ಚು ವಿಚಾರ ಮಾಡಿದರೆ ಏನು ನ್ಯಾಯ ದೊರಕುತ್ತದೋ ಅದು ದೊರಕುವುದಕ್ಕೆ ತೊಂದರೆಯಾಗುತ್ತದೆಂಬ ದೃಷ್ಟಿಯಿಂದ ಕೇಳುವುದಕ್ಕೆ ಹೋಗಿಲ್ಲ.

ಶ್ರೀ ಟಿ. ಆರ್. ಶಾಮಣ್ಣ —ಸೈಟನ್ನು ಯಾರೂ ಕೊಂಡುಕೊಂಡಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಅದಕ್ಕೇ ನಾನು ಹೇಳುತ್ತಿದ್ದೆ. ಸರ್ಕಾರದಲ್ಲಿ ವಿಚಾರಿಸದೆ ಯಾವ ರೀತಿ ಮುಗ್ಧ ಜನ ಬಲೆಗೆ ಬಿದ್ದು ಹಣವನ್ನು ಕಳೆದುಕೊಂಡಿದ್ದಾರೆ ಎಂದು.

ಒಬ್ಬ ಸದಸ್ಯರು.—ಮುಗ್ಧರು ಎಂದು ಹೇಳಬೇಡಿ.

ಶ್ರೀ ಕೆ. ಎಚ್. ರಂಗನಾಥ್. —ಒಬ್ಬ ಪ್ರೊಫೆಸರ್ ಆ ಕೆಲಸ ಮಾಡಿದರೆ ಅತ ಮುಗ್ಧನಲ್ಲವೆ ಸೈಟ್ ಅಲಾಟ್ ಮಾಡಿದ್ದಾರೆಂದೆ ಹೆಚ್.ಎಂ.ಟಿ. ಪ್ರಾವಿಡೆಂಟ್ ಫಂಡಿನಿಂದ ಹಣ ಡ್ರಾ ಮಾಡಿದವರು ಮುಗ್ಧರಲ್ಲವೆ? ಅದು ಏನೇ ಇರಲಿ. ಇವತ್ತು ಜಾಗ ಕೊಡಿಸಬೇಕೆಂದು ಸರ್ಕಾರದ ಗಮನದಲ್ಲಿದೆ ಆದ್ದರಿಂದ ಅತಿ ಶೀಘ್ರವಾಗಿ ಜಾಗ ಕೊಡಿಸುತ್ತೇವೆ. ಮಾನ್ಯ ಶಾಮಣ್ಣನವರು ನನಗೆ ಬರೆದಿರುವ ಪತ್ರವನ್ನು ನಾನು ಅವಸರಅವಸರವಾಗಿ ನಿನ್ನೆ ರಾತ್ರಿ ನೋಡಿದೆ ಅದರಲ್ಲಿ ಜಾಗ ಕೊಡಿಸದೆ ಹೋದರೆ ನನ್ನ ಮನೆ ಮುಂದೆ ಉಪವಾಸ ಸತ್ಯಾಗ್ರಹ ಮಾಡುತ್ತೇನೆಂದು ಬರೆದಿದ್ದಾರೆ ಮನಸ್ಸು ಕರಗಿ ಏನಾದರೂ ಪ್ರಯತ್ನಪಟ್ಟರೂ ಪಡಬಹುದೆಂದು ಉದ್ದೇಶದಿಂದ ಬರೆದಿರಬಹುದು. ಆದರೆ ನನ್ನ ಮನೆ ಮುಂದೆ ಬಂದು ಸತ್ಯಾಗ್ರಹ ಮಾಡಿದರೆ ಏನು ಪ್ರಯೋಜನ ? ಸ್ವಾಮಿ ಬನ್ನಿ ... ದು ಕರೆದು ಊಟಕ್ಕೆ ಹಾಕಬೇಕಾಗುತ್ತದೆ. ನಾನು ಅದಕ್ಕೆ ಅವಕಾಶ ಕೊಡುವುದಿಲ್ಲ, ನನ್ನ ...ನ ಮುಂದೆ ಮಾಡಬೇಡಿ. ಯಾರಿಗೆ ಗೊತ್ತು, ಯಾರು ನಿಜ ಹೇಳುತ್ತಾರೆ ಯಾರು ಸುಳ್ಳು ಹೇಳುತ್ತಾರೆ ಎಂದು. ಆದ್ದರಿಂದ ಸರ್ಕಾರ ಎಲ್ಲವನ್ನು ಪರಿಶೀಲನೆ ಮಾಡಿ ಹಣವನ್ನು ಕೊಡಿಸತಕ್ಕ ವ್ಯವಸ್ಥೆ ಮಾಡಬೇಕೆಂದು ವಿಚಾರ ಮಾಡಿದೆ ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಟಾಚ್‌ಮೆಂಟ್ ಬಿಫೋರ್ ಜಡ್ಜ್‌ಮೆಂಟ್ ಆರ್ಡರ್ ತೆಗೆದುಕೊಂಡು ನಂತರ ಅವರು ಮೇಲಿನ ಕೋರ್ಟಿಗೆ ಹೋಗಿ ವಜಾ ಮಾಡಿಸಿದ್ದಾರೆಂದು ತಿಳಿಸಿದಿರಿ. ಆದರ ಮೇಲೆ ತಾವು ಅಪೀಲ್ ಹಾಕಿ ಅಟಾಚ್‌ಮೆಂಟ್ ಬಿಫೋರ್ ಜಡ್ಜ್‌ಮೆಂಟ್ ಕೇಳುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ಕೆ. ಎಚ್. ರಂಗನಾಥ್.—ನಾವು ಏನಾದರು ಹೋದರೆ ರಿಟ್ ಪಿಟಿಷನ್ ಫೈಲ್ ಮಾಡಬೇಕಾಗುತ್ತದೆ ಅವಸರದಲ್ಲಿದ್ದರಿಂದ ಆ ಬಗ್ಗೆ ಪೂರ್ಣ ವಿವರ ಗೊತ್ತಿಲ್ಲ. ಕಾಲಾವಕಾಶ ಇದ್ದರೆ ನೋಡಿ ಕೋಡಿಸುತ್ತೇನೆ. ಒಟ್ಟಿನಲ್ಲಿ ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಡುತ್ತೇನೆ. I am happy to inform that the mat er is taken up by the High Court by means of a writ petition.

ಶ್ರೀಮಾನ್ ಶಾಮಣ್ಣನವರು ಸಾಲ ವಸೂಲಿ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ತಮಗೆಲ್ಲಾ ಗೊತ್ತಿರುವ ಹಾಗೆ ದೊಡ್ಡ ದೊಡ್ಡ ಜನ ಯಾರಿದ್ದಾರೆ ಹಣವನ್ನು ವಾಪಸ್ಸು ಕೊಡದೇ ಬಂಡಾಟ ಮಾಡತಕ್ಕವರು ಯಾರಿದ್ದಾರೆ ಅವರು ಕೊಡದೇ ಬಂಡಾಟ ಮಾಡುತ್ತಾ ಇರುವುದರಿಂದ ಸರ್ಕಾರವೇ ಒಂದು ಕೋಟಿ ರೂಪಾಯಿ ಇಟ್ಟು ಜಮೀನು ಕೊಂಡುಕೊಳ್ಳತಕ್ಕ ವ್ಯವಸ್ಥೆ ಮಾಡಿದೆ. ಜಿಲ್ಲಾ ಸಹಕಾರಿ ಬ್ಯಾಂಕುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಎಂದು ಹೇಳಿದ್ದಾರೆ. ಇದು ವಾಸ್ತಂಶ, ನಾಲ್ಕ ಬ್ಯಾಂಕುಗಳ ಪೈಕಿ ಮೂರು ಬ್ಯಾಂಕುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದೆ. ಬೆಂಗಳೂರು ಜಿಲ್ಲೆಯ ಬ್ಯಾಂಕಿನ ಪರಿಸ್ಥಿತಿ ಕೂಡ ಬಹಳ ಚೆನ್ನಾಗಿ ಇಲ್ಲ, ಕೇಂದ್ರ ರಿಸರ್ವ್ ಬ್ಯಾಂಕಿನಿಂದ ಕ್ರೆಡಿಟ್ ಲಿಮಿಟ್ ಕೂಡ ದೊರೆಯುತ್ತಿಲ್ಲ. ತುಮಕೂರು ಬ್ಯಾಂಕಿನ ವಿಚಾರವಾಗಿ ಮಾನ್ಯ ಮಂಜುನಾಥ್‌ರವರು ಹೇಳಿದ್ದಾರೆ' ಸುಮಾರು ನಾಲ್ಕು ಕೋಟಿ ರೂಪಾಯಿಗಳ ಸಾಲ ಹಂಚಿದ್ದೇವೆ ಚೆನ್ನಾಗಿಲ್ಲ ಅಂದರ ಹೇಗೆ ? ಆಡಿಟ್ ರಿಪೋರ್ಟ್ ಬಗ್ಗೆ ಮತ್ತು ಟೂರ್ ಬಗ್ಗೆ ಹೇಳಿದ್ದಾರೆ, ಸುಮಾರು ೪ ಸಾವಿರ ರೂಪಾಯಿಗಳು ಟೂರ್‌ಗಾಗಿ ಕೊಟ್ಟಿದ್ದಾರೆಂದು ಹೇಳಿದ್ದಾರೆ, ಅದರ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತೇನೆ.

ಶಾಮಣ್ಣನವರು ಬಿಲ್ಲುಗಳು ಕನ್ನಡದಲ್ಲಿಯೂ ಇಚ್ಛಾಗಬೇಕೆಂದು ಹೇಳಿದ್ದಾರೆ, ಇದರ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯ ಇಲ್ಲ, ಆದಕ್ಕೆ ಬೇಕಾದ ಸಾಧನಗಳನ್ನು ಮೊದಲು ಮಾಡಿಕೊಳ್ಳಬೇಕು ಇದು ತತ್‌ಕ್ಷಣ ಅಗತಕ್ಕ ಕೆಲಸವಲ್ಲ.

ಶಾಸಕಾಂಗ ಸ್ವತಂತ್ರವಾಗಿರಬೇಕು ಎನ್ನುವ ಮಾತನ್ನು ಪ್ರಸ್ತಾಪ ಮಾಡುತ್ತಾ ಹಿಂದೆ ಇದ್ದಂತಹ ಮಂತ್ರಿಗಳು ಈ ಸಭೆಗೆ ಆಶ್ವಾಸನ ಕೊಟ್ಟಿದ್ದರು ಎಂದು ಹೇಳಿದ್ದಾರೆ. ತಮ್ಮ ನೇತೃತ್ವದಲ್ಲಿ ವಿರೋಧಿಪಕ್ಷದ ನಾಯಕರೂ ಇದ್ದಂತಹ ಒಂದು ಸಮಿತಿ ಕೂಡ ಆಗಿತ್ತು ಎಂದು ಪ್ರಸ್ತಾಪ ಮಾಡಿದ್ದಾರೆ ನನ್ನ ವೈಯಕ್ತಿಕ ಅಭಿಪ್ರಾಯವಾದರೂ ಕೂಡ ಶಾಸಕಾಂಗ ಪ್ರತ್ಯೇಕವಾಗಿ ಇರಬೇಕೆಂಬುದೇ ಅಗಿದೆ. ಇದನ್ನು ಮೊದಲನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್ ಮೀಟಿಂಗ್‌ನಲ್ಲಿಯೂ ಕೂಡ ಹೇಳಿದ್ದೇನೆ ಇದರ ಬಗ್ಗೆ ವಿಚಾರ ಮಾಡಿಸುತ್ತೇನೆ ಅಲ್ಲದೆ ಶಾಸಕಾಂಗ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿಗೆ ಓವರ್ ಟೈಂ ಅಲೋಯನ್ಸ್ ಕೊಡಬೇಕಾದ್ದನ್ನು ಕೂಡ ವಿಚಾರ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಕೊಡುತ್ತೇವೆ ಅಂತ ಹೇಳಿ.

ಶ್ರೀ ಸಿ. ಬೈರೇಗೌಡ —ಅಧ್ಯಕ್ಷರೇ, ಶಾಸಕರ ಭವನದಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಜಾಸ್ತಿ ಕೊಡುತ್ತಿದ್ದಾರೆ. ಇಲ್ಲಿ ಸಂಜೆ 8-9 ಘಂಟೆವರಗೂ ಕೂಳಿತುಕೊಂಡು ಕೆಲಸ ಮಾಡುವವರಿಗೆ ಗಂಟೆಗೆ ೪ ಆಣೆ ಕೊಡುತ್ತಿದ್ದಾರೆ. ಇವರಿಗೂ ಕೂಡ ಹೆಚ್ಚಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ:

ಶ್ರೀ ಎಚ್. ಡಿ. ದೇವೇಗೌಡ.—ಬೇರೆ ಬೇರೆ ಕಡೆ ಸುಳ್ಳು ಓವರ್ ಟೈಂ ಹೇಳಿಕೊಂಡು ಬೇಕಾದಷ್ಟು ದುಡ್ಡು ಕೂಡೆಯುತ್ತಾರೆ ನಮ್ಮ ಮುಂದೆ ಕೂಳಿತುಕೊಂಡು ಕೆಲಸ ಮಾಡುವ ನೌಕರರಿಗೆ ಏತಕ್ಕೆ ಕೊಡಬಾರದು ?

ಶ್ರೀ ಕೆ. ಎಚ್. ರಂಗನಾಥ್,—ಮಾನ್ಯ ಅಧ್ಯಕ್ಷರೇ ಪುನರ್ರಚನೆಯ ಬಗ್ಗೆ ಹಲವಾರು ಸದಸ್ಯರುಗಳು ಸಲಹೆಗಳನ್ನು ಕೊಟ್ಟಿದ್ದಾರೆ. ತಿಮ್ಮಪ್ಪನವರು ಕಲವಾರು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾ ಶಂಕರನಾರಾಯಣ ಸೊಸೈಟಿ ಬಗ್ಗೆ ಹೇಳಿದ್ದಾರೆ, ಇದರ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತೇನೆ. 438-78 ಸೈಟುಗಳ ಅಲಾಟ್‌ಮೆಂಟ್ ವ್ಯವಹಾರದಲ್ಲಿ ನಡೆದಿರುವ ವಿಷಯವನ್ನು ಸೂಕ್ತವಾಗಿ ವಿಚಾರಣೆ ಮಾಡಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ಸೊಸೈಟಿಗೆ ಕಾರ್ಪೊರೇಷನ್ನಿನವರು 5 ಲಕ್ಷ ಹಾಗೂ ಸರ್ಕಾರ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸೊಸೈಟಿ ಖರ್ಚುಮಾಡತಕ್ಕ ರೀತಿ ಸರಿಯಿಲ್ಲ

ಶ್ರೀ ಕೆ. ಎಚ್. ರಂಗನಾಥ್.—ವಿಚಾರಣೆ ಮಾಡಿಸುತ್ತೇನೆ. ಅಧಿಕಾರಿಗಳು ಕೊಟ್ಟಂತ ಅಂಕಿಅಂಶಗಳ ಮೇಲೆ ಮಾತನಾಡಬೇಕಾಗುತ್ತದೆ. ಜನರಲ್ ಬಾಡಿ ಕೂಡ ಮಾಡಿದ್ದಾರೆಂದು ಗೊತ್ತಾಗಿದೆ ಒಂದೇ ಮನೆಯವರಿಗೆ ಕೊಟ್ಟಿದ್ದಾರೆಂದು ತಾವು ಏನು ಹೇಳಿದ್ದೀರಿ, ಅದನ್ನು ಕೂಡ ವಿಚಾರ ಮಾಡಿಸುತ್ತೇನೆ ಪುನರ್ರಚನೆ ಬಗ್ಗೆ ಮಲೆನಾಡಿನ ಸದಸ್ಯರು ಹೇಳಿದ್ದಾರೆ, ನಮ್ಮಲ್ಲಿ ಕೆಲವು ನಾರ್ಮ್ಸ್ ಇಟ್ಟಿದ್ದೇವೆ ಅದನ್ನು ಸಡಿಲಗೊಳಿಸಿ ಎನ್ನುವ ಮಾತನ್ನು ಹೇಳಿದ್ದಾರೆ ಈಗ ಇರತಕ್ಕ ಕಾನೂನಿನಲ್ಲಿಯೇ ಅವಕಾಶ ಇದೆ. ಇನ್ನು ಹೆಚ್ಚು ಆಗಬೇಕು ಎನ್ನುವ ಬಗ್ಗೆ ಆಲೋಚನೆ ಮಾಡುತ್ತೇನೆ. ಸತ್ತುಹೋದರೆ, ಡಿಫಾಲ್ಟರ್ ಆಗುತ್ತಾರೆ ಎನ್ನುವ ಅಪಾದನೆ ಕೂಡ ಇತ್ತು.

1976ರ ಸೆಪ್ಟಂಬರ್‌ನಲ್ಲಿ ನಮ್ಮ ಇಲಾಖೆಯಿಂದ, ಇಂಥಾದ್ದು ಏನಾದರೂ ಇದ್ದರೆ ಅವನ್ನು ಪುನರ್ವಿಮರ್ಶೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಸುತ್ತೋಲೆಯನ್ನು ಕಳುಹಿಸಲಾಗಿದೆ. ಸುತ್ತೋಲೆ ಮೇರೆಗೆ ಈಗಾಗಲೇ ಕ್ರಮತೆಗೆದುಕೊಂಡು ಸುಮಾರು 224 ಸೊಸೈಟಿಗಳಲ್ಲಿ ಇಂಥ ಬದಲಾವಣೆಗಳನ್ನು ಮಾಡಿದ್ದಾರೆ. 2124 ಸೊಸೈಟಿಗಳನ್ನು ಪುನರ್ರಚನೆ ಮಾಡಲಾಗಿದೆ. 8 ಸಾವಿರ ಸಹಕಾರ ಸಂಘಗಳಲ್ಲಿ 1596 ಸಹಕಾರ ಸಂಘಗಳು ಹಾಗೆಯೇ ಉಳಿದುಕೊಂಡಿವೆ. ಈ ಸಹಕಾರ ಸಂಘಗಳಲ್ಲಿ ಹಿಂದೆ ಇದ್ದಂತ ಆಡಳಿತ ವರ್ಗವೇ ಕೆಲಸ ಮಾಡುತ್ತಿದೆ. ಇವುಗಳಲ್ಲಿ ಕೈಹಾಕತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ. ಒಂದೊಂದು ಸಹಕಾರ ಸಂಘಕ್ಕೆ 9 ಜನರಂತೆ 2124 ಸಹಕಾರ ಸಂಘಗಳಿಗೆ 19,116 ಜನ ಡೈರೆಕ್ಟರುಗಳನ್ನು ನಾಮಕರಣ ಮಾಡಿದ್ದೇವೆ. ಎರಡು ಸಾವಿರ ಸೊಸೈಟಿಗಳಲ್ಲಿರತಕ್ಕ ಸುಸ್ತಿದಾರರಿಗೆ ನೋಟೀಸ್ ಕಳುಹಿಸಿದ್ದೇವೆ. ಒಟ್ಟು 224 ಸೊಸೈಟಿಗಳನ್ನು ಬದಲಾವಣೆ ಮಾಡಿದ್ದು. ಆ ಪೈಕಿ 248 ಜನ ಸುಸ್ತಿದಾರರು, 44 ಜನ ಸತ್ತಿರತಕ್ಕವರು, ಡಿಫಾಲ್ಟರ್ಸ್ ಎಂದು ಮಾಡುವಾಗ ಸತ್ತಿರಬಹುದು, ಮಾಡಿದಮೇಲೆ ಸತ್ತಿರಬಹುದು. ನನ್ನ ಕ್ಷೇತ್ರದಲ್ಲಿ ಒಬ್ಬರು ಪಟ್ಟಿ ತಯಾರು ಮಾಡಿದಮೇಲೆ ಸತ್ತಿದ್ದಾರೆ. ರಾಜೀನಾಮೆ ಕೊಟ್ಟಿರುವವರು 30 ಜನ ಬೇರೆಬೇರೆ ಇದ್ದವರು 58 ಜನ, ಹಣ ದುರುಪಯೋಗಕ್ಕಾಗಿ 5 ಜನ, ಬೇರೆ ಕಾರಣಗಳಿಗಾಗಿ 81 ಜನ ಒಟ್ಟು 466 ಜನರನ್ನು ಬದಲಾವಣೆ ಮಾಡಿದ್ದೇವೆ. ಮೊದಲನೆ ಸುತ್ತೋಲೆ 9ನೇ ಸೆಪ್ಟಂಬರ್ 1976ರಲ್ಲಿ ಹೋಗಿದೆ, ತದನಂತರ, 11ನೇ ನವೆಂಬರ್ 1976ರಲ್ಲಿ ಟೆಲಿಗ್ರಾಂ ಹೋಗಿದೆ ಮತ್ತೆ ಟೆಲಿಗ್ರಾಂ ಫಾಲೋ ಮಾಡಿಕೊಂಡು ಇನ್ನೊಂದು ಸುತ್ತೋಲೆ ಹೋಗಿದೆ. ಮುಂದೆ ಯಾರು ಸತ್ತರೂ ಪಟ್ಟಿ ಬದಲಾವಣೆ ಮಾಡುತ್ತೇವೆ ತಾವು ಕೂಡ ಕೆಲವರನ್ನು ಕೊಡುವವರಿದ್ದೀರಿ, ಅದರಲ್ಲೂ ಕೂಡ ಆ ರೀತಿ ಬದಲಾವಣೆ ಮಾಡಬೇಕಾಗುತ್ತದೆ.

ಮಾನ್ಯ ಬೈರೇಗೌಡರು ಬಹಳ ಅವಸರದಲ್ಲಿ ಒಂದು ಕಾಗದವನ್ನು ಕಳುಹಿಸಿ ಕೊಟ್ಟರು. ಅವರು ಸೆಕ್ರೆಟರಿಯವರಿಂದ ಒಂದು ಸರ್ಟಿಫಿಕೇಟನ್ನು ತೆಗೆದುಕೊಂಡು ಬಂದಿದ್ದಾರೆ. ವೆಂಕಟರಮಣ ಎನ್ನುವವರು ಬಿ.ಇ. ಗ್ರಾಜ್ಯುಯೇಟ್. He is an young man. I know him personally. He deserves to be in any institution. ಅವರು ಅಲ್ಲಿಯ ಸೊಸೈಟಿಯಲ್ಲಿ ಹಣ ದುರುಪಯೋಗ ಮಾಡಿದ್ದಾರೆ ಎಂದರೆ ಆ ಮಾತು ಬೇರೆ. ಡಿಫಾಲ್ಟರ್ ಆಗಿ ಕಂಟಿನ್ಯೂ ಆಗಿದ್ದಾರೆಯೇ ಎನ್ನುವುದನ್ನು ಅವರು ನೋಡಿಲ್ಲ. The Certificate says as follows.—

> "This is to certify that Sri Venkataramana of Belaganahalli has borrowed a loan of Rs. 33,500 and Rs. 6,700 has become over due as on 17-6-1977".

17ನೇ ತಾರೀಖಿನ ದಿವಸ ಓವರ್‌ಡ್ಯೂ ಆಗಿದೆ. ಇದನ್ನು ವಸೂಲು ಮಾಡದಿದ್ದರೆ ಅವನು ಡಿಫಾಲ್ಟರ್ ಆಗುತ್ತಾನೆ, ವಸೂಲಿಗೂ ನಾವು ಸ್ವಲ್ಪ ದಿವಸ ಕೊಡಬೇಕಾಗುತ್ತದೆ. ಒಂದು ತಾಲ್ಲೂಕಿನಲ್ಲಿ ಸುಮಾರು ನಾಲ್ಕೈದು ಜನ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳು ಇರುತ್ತಾರೆ ಒಂದೊಂದು ಸಾರಿ ಇವರ ಕಣ್ಣು ತಪ್ಪಿಯೂ ಕೂಡ ಕೆಲವು ವಿಷಯಗಳು ಹೋಗತಕ್ಕ ಪರಿಸ್ಥಿತಿ ಬರಬಹುದು.

When the amount has become overdue-it is on 17-6-1977 and to-day we are in 7th of July. Not even a fortnight has lapsed. ವಸೂಲಿ ಮಾಡುವುದಕ್ಕೆ ಕಾಲ ಏನಾದರೂ ಇದೆಯೋ ಏನೋ ಗೊತ್ತಿಲ್ಲ.

3-00 P.M.

ಶ್ರೀ ಸಿ. ಬೈರೇಗೌಡ.—ನಾವು ಇವರನ್ನು ತೆಗೆಯಿರಿ ಎಂದು ಹೇಳಿದ್ದು ಅಷ್ಟೇ.

ಶ್ರೀ ಕೆ. ಎಚ್. ರಂಗನಾಥ್.—ಇದಕ್ಕೆಲ್ಲಾ ಕಾನೂನು ಇದೆ. ಪುನರಚನೆ ಮಾಡುವುದರ ಬಗ್ಗೆ ಇದನ್ನೆಲ್ಲಾ ನಾವು ಸರಿಯಾಗಿ ಮಾಡಿದ್ದೇವೆ ಮತ್ತು ಸರಿ ಮಾಡುತ್ತೇವೆ ಎನ್ನುವ ಮಾತನ್ನು ನಾನು ಸಭೆಯ ಮುಂದೆ ಇಡುತ್ತೇನೆ.

ಇನ್ನು ಕ್ರೆಡಿಟ್ ಸೊಸೈಟಿಗಳ ಬಗ್ಗೆ ಮಾನ್ಯ ತಿಮ್ಮಪ್ಪನವರು ಕೆಲವು ವಿಚಾರಗಳನ್ನು ಹೇಳಿದ್ದಾರೆ ಇವತ್ತಿನ ದಿವಸ 300 ಕೋಟಿ ರೂಪಾಯಿಗಳ ಕ್ರೆಡಿಟ್ ಗ್ಯಾಪ್ ಇದೆ, ಅದನ್ನು ಸರಿ ಮಾಡಬೇಕು ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅಲ್ಲದೆ ಈಗ ಕೊಟ್ಟಿರತಕ್ಕ ಸಾಲ ಸಾಲದು ಎಂದೂ ಕೂಡ ಹೇಳಿದ್ದಾರೆ. ಇದನ್ನು ನಾನು ಒಪ್ಪುತ್ತೇನೆ. ಈಗ ವ್ಯವಸಾಯದ ಕುಟುಂಬಗಳಲ್ಲಿ ಮೆಂಬರ್‌ಷಿಪ್ ನೂರಕ್ಕೆ 54ರಷ್ಟು ಮಾತ್ರ ಬಂದಿದೆ 72 ಪರ್ಸೆಂಟ್ ಕುಟುಂಬಗಳು ಸೊಸೈಟಿಗಳಲ್ಲಿ ನೋಂದಾಣಿಕೆಯಾಗಿವೆ. ಈ 72 ಕುಟುಂಬಗಳಲ್ಲಿ ಸಾಲದ ವ್ಯಾಪ್ತಿಯೊಳಗೆ ಸುಮಾರು 30 ರಷ್ಟು ಬರುತ್ತವೆ. ಇದು ಮೀಡಿಯಂ ಟರ್ಮ್ ಲೋನ್ ವಿಚಾರದಲ್ಲಿ ಆಗಿರಬಹುದು, ಲಾಂಗ್‌ಟರ್ಮ್ ಲೋನ್ ವಿಚಾರದಲ್ಲಿ ಆಗಿರಬಹುದು, ಅಥವಾ ಷಾರ್ಟ್ ಟರ್ಮ್ ಲೋನ್ ವಿಚಾರದಲ್ಲಿ ಆಗಿರಬಹುದು. ಆದ್ದರಿಂದ ಈ ಒಂದು ಗ್ಯಾಪ್ ಏನು ಇದೆ ಅದನ್ನೂ ಸರಿ ಮಾಡಬೇಕಾಗಿದೆ. ಈಗಾಗಲೇ ನಾವು ಶೇಕಡ 30 ರಷ್ಟನ್ನು ಸಾಲದ ವ್ಯಾಪ್ತಿಯಲ್ಲಿ ತಂದಿದ್ದೇವೆ 70ರಷ್ಟನ್ನು ಸಾಲದ ವ್ಯಾಪ್ತಿಯಲ್ಲಿ ಬರುವಂತೆ ಮಾಡಬೇಕಾಗುತ್ತದೆ. ಇದರಲ್ಲಿ ಬರೀ ವ್ಯವಸಾಯಗಾರರೇ ಅಷ್ಟೇ ಅಲ್ಲ, ವ್ಯವಸಾಯದ ಕೂಲಿಗಾರರು ಬರಬೇಕು. ಮತ್ತೆ ಸಣ್ಣ ಹಿಡುವಳಿದಾರರು ಹರಿಜನ ಗಿರಿಜನರು ಇದರ ವ್ಯಾಪ್ತಿಯೊಳಗೆ ಬರಬೇಕು. ಹೋದವರ್ಷ 16 ಲಕ್ಷ ಕುಟುಂಬಗಳು ಮೆಂಬರ್‌ಷಿಪ್ ವ್ಯಾಪ್ತಿಯಲ್ಲಿ ಬಂದಿದೆ ಆದರೆ 6 ಲಕ್ಷ ಕುಟುಂಬಗಳು ಮಾತ್ರ ಇದರ ವ್ಯಾಪ್ತಿಯಲ್ಲಿ ಬಂದಿದೆ. ಇನ್ನೂ ಹತ್ತು ಲಕ್ಷ ಕುಟುಂಬಗಳನ್ನು ಸೊಸೈಟಿಗಳ ಮೆಂಬರ್ ಮಾಡತಕ್ಕ ಕೆಲಸ ಆಗಬೇಕಾಗಿದೆ. ಸುಮಾರು 26 ಲಕ್ಷ ವ್ಯವಸಾಯಗಾರರು ಇವತ್ತು ಸದಸ್ಯತನವನ್ನು ಪಡೆದಿದ್ದಾರೆ, ಹೋದವರ್ಷ ತಮಗೆ ಗೊತ್ತಿರುವ ಹಾಗೆ ನಾವು ಕ್ರೆಡಿಟ್ ಪಾಲಿಸಿಯನ್ನು ಹಾಕಿಕೊಂಡು. ಸುಮಾರು 200 ಕೋಟಿ ರೂಪಾಯಿಗಳನ್ನು ಸಾಲವಾಗಿ ಕೊಡಬೇಕು ಎಂದು ಮಾಡಿದ್ದೇವೆ. ಇದರಲ್ಲಿ 145 ಕೋಟಿ ರೂಪಾಯಿಗಳನ್ನು ಷಾರ್ಟ್ ಟರ್ಮ್ ಲೋನ್ ಆಗಿ ಕೊಡಬೇಕು ಎಂದೂ, 75 ಕೋಟಿ ರೂಪಾಯಿಗಳನ್ನು ಜಿಲ್ಲಾ ಕೇಂದ್ರ ಕೋ ಆಪರೇಟಿವ್ ಬ್ಯಾಂಕ್‌ಗಳ ಮುಖಾಂತರ ಕೊಡುವುದು, 70 ಕೋಟಿ ರೂಪಾಯಿಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳ ಮುಖಾಂತರ ಕೊಡುವುದು, 15 ಕೋಟಿ ರೂಪಾಯಿಗಳನ್ನು ಎಫ್.ಎಸ್.ಸಿ.ಎಸ್ ರೂರಲ್ ಫಿನಾನ್ಸಿಂಗ್ ಇನ್ಸ್‌ಟಿಟ್ಯೂಷನ್ಸ್ ಮುಖಾಂತರ ಕೊಡುವುದು. 15 ಕೋಟಿ ರೂಪಾಯಿಗಳನ್ನು ಸಿರಿಕಲ್ಚರ್ ಸಹಕಾರ ಸಂಸ್ಥೆಗಳ ಮುಖಾಂತರ ಕೊಡುವುದು ಇನ್ನೂ 25 ಕೋಟಿ ರೂಪಾಯಿಗಳನ್ನು ಭೂ ಅಭಿವೃದ್ಧಿ ಬ್ಯಾಂಕುಗಳ ಮುಖಾಂತರ ಕೊಡಬೇಕು ಎಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆದರೆ 200 ಕೋಟಿ ರೂಪಾಯಿಗಳಲ್ಲಿ ಬಹುಪಾಲು ನಾವು ನಿರೀಕ್ಷಿಸಿದ ಮಟ್ಟಕ್ಕೆ ಪ್ರಯತ್ನ ಮಾಡಿದಾಗ್ಯೂ ಕೂಡ ಇವತ್ತು 130 ಕೋಟಿ ರೂಪಾಯಿಗಳ ಸಾಲದ ವ್ಯವಸ್ಥೆಯನ್ನು ಮಾಡಿದ್ದೇವೆ ಇದು ಬರಗಾಲದ ಪರಿಸ್ಥಿತಿಯಲ್ಲಿ ಮಾಡಲಾದ ಪ್ರಯತ್ನ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿಯಬೇಕು. ಸುಮಾರು 23 ಭೂ ಅಭಿವೃದ್ಧಿ ಬ್ಯಾಂಕ್‌ಗಳು ದೀರ್ಘಾವಧಿ ಸಾಲವನ್ನು ಕೊಟ್ಟಿಲ್ಲ ಇವು ಅಲ್ಪಾವಧಿ ಸಾಲವನ್ನು ಕೊಡತಕ್ಕ ವ್ಯವಸ್ಥೆಯನ್ನೂ ಮಾಡಿದ್ದೇವೆ. ಜಿಲ್ಲಾ ಕೇಂದ್ರ ಬ್ಯಾಂಕ್ ಮುಖಾಂತರ ನಾವು 70 ಕೋಟಿ ರೂಪಾಯಿಗಳನ್ನು ಒದಗಿಸಿಕೊಂಡಿದ್ದೇವೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ನಾವು 70 ಕೋಟಿ ರೂಪಾಯಿಗಳನ್ನು ನಿರೀಕ್ಷಣೆ ಮಾಡಿದಾಗ್ಯೂ ಕೂಡ ದೊರೆತಿದ್ದುದ್ದು 23 ಕೋಟಿ ರೂಪಾಯಿಗಳನ್ನು ಹೀಗಾಗಿ, ನಮ್ಮ ಬಯಕೆಯಂತೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ಹಣ ಹೆಚ್ಚಾಗಿ ದೊರೆಯಲ್ಲಿಕ್ಕೆ ಸಾಧ್ಯವಾಗದೆ ಇರತಕ್ಕದ್ದನ್ನು ನಾನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ನಾನು ಮಾನ್ಯ ತಿಮ್ಮಪ್ಪನವರು ಮಾತನಾಡುವಾಗ ಅವರಿಂದ ಬಹಳ ನಿರೀಕ್ಷಣೆ ಮಾಡಿದ್ದೆ. ಅವರು ತಮ್ಮ ಹೆಚ್ಚಿನ ಸಮಯವನ್ನು ಬರೀ ಟೀಕೆಗಳಿಗೆ ಮೀಸಲಿಟ್ಟು ಪಾಲಿಸಿ ವಿಷಯಗಳ ಬಗ್ಗೆ ಆಗಲೀ ಉತ್ತಮ ಸಲಹೆಯನ್ನಾಗಲಿ ಕೊಡಲಿಲ್ಲ. ಸರ್ಕಾರದವರು ಕೊಟ್ಟಂಥ ೧೩೦ ಕೋಟಿ ರೂಪಾಯಿಗಳ ಸಾಲವನ್ನು ತಿಳಿದು ಏನೂ ಆಗಿಲ್ಲ ಎಂದು ಹೇಳಿದರೆ ಅದು ಸರಿಯಲ್ಲ. ಸರ್ಕಾರದಿಂದ ಮೆಚ್ಚತಕ್ಕ ಕೆಲಸ ವಾಗಿದೆ ಎನ್ನುವುದನ್ನು ಮಾನ್ಯ ಸದಸ್ಯರು ಹೇಳಬೇಕಾಗಿತ್ತು.

ಇನ್ನು ಎಫ್.ಎಸ್.ಸಿ.ಎಸ್, ಇದರ ಬಗ್ಗೆ ನೇಮಕವಾಗಿರತಕ್ಕ ವಿಷಯವನ್ನು ನಮ್ಮ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ ಇಲ್ಲಿ ಮ್ಯಾನೇಜಿಂಗ್ ಸ್ಟಾಫ್ ವಗೈರೆ ಆಗಿಲ್ಲ, ಮ್ಯಾನೇಜಿಂಗ್ ಡೈರೆಕ್ಟರ್ ಆಗಿಲ್ಲ ಟೆಕ್ನೀಷಿಯನ್ಸ್ ಟೆಕ್ನಿಕಲ್ ಅಸಿಸ್ಟೆಂಟ್ಸ್ ನೇಮಕ ಮಾಡಿಲ್ಲ, ಹೀಗಾಗಿ ಅಲ್ಲಿ ಸಮರ್ಪಕವಾಗಿ ಹಣದ ವಿನಿಯೋಗ ಆಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಪುನರ್ರಚನೆ ಮಾಡುವಾಗ ಒಂದು ಜಿಲ್ಲೆಯಲ್ಲಿ ಮಾತ್ರ ಇದನ್ನು ಪೂರ್ಣ ಮಾಡಿಲ್ಲ. ಸುಮಾರು ೭ ತಾಲ್ಲೂಕುಗಳು ಹಾಗೆಯೇ ಉಳಿದಿವೆ. ಒಂದೆರಡು ಸೊಸೈಟಿಗಳಲಿ ಸ್ವಲ್ಪ ಗೊಂದಲ ಜಾಸ್ತಿಯಿದ್ದುದರಿಂದ ಹಾಗೆಯೇ ಬಿಟ್ಟಿದ್ದೇವೆ. ಎಫ್.ಎಸ್.ಸಿ ಎಸ್. ಕೆಳಗೆ ೧೧೧ ಸಹಕಾರ ಸಂಘಗಳನ್ನು ಮಾಡಬೇಕು ಎಂದು ಇದ್ದೆವು. ಈಗ ನೂರು ಸಹಕಾರ ಸಂಘ ಗಳನ್ನು ಮಾಡಿದ್ದೇವೆ. ಇದರಲ್ಲಿ ೬೭ ಸಹಕಾರ ಸಂಘಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳ ವಶಿಗೆ ಕೊಟ್ಟಿದ್ದೇವೆ ೩೩ ಜಿಲ್ಲಾ ಅಪೆಕ್ಸ್ ಬ್ಯಾಂಕ್ ವಶಿಗೆ ಹಣ ಪಡೆಯಲಿಕ್ಕೆ ಕೊಟ್ಟಿದ್ದೇವೆ. ಸಿರಿಕಲ್ಚರ್ ಸೊಸೈಟಿಗಳನ್ನು ೧೧೩ ಮಾಡಬೇಕು ಎಂದು ನಮ್ಮ ಗುರಿ ಇದ್ದರೂ ೯೬ ಸೊಸೈಟಿಗಳನ್ನು ಮಾಡಿದ್ದೇವೆ. ೭೬ ಸೊಸೈಟಿಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳ ವಶಿಗೆ ಕೊಟ್ಟಿದ್ದೇವೆ. ೨೦ ಸೊಸೈಟಿಗಳ ಜಿಲ್ಲಾ ಬ್ಯಾಂಕ್ ಮತ್ತು ಆಪೆಕ್ಸ್ ಬ್ಯಾಂಕುಗಳಿಂದ ಹಣ ಪಡೆಯುತಕ್ಕ ವ್ಯವಸ್ಥೆಯಾಗಿದೆ. ಹೀಗೆ ಒಟ್ಟು, ಎರಡೂ ಸೇರಿ, ೨೨೪ ಸಹಕಾರ ಸಂಘಗಳನ್ನು ಮಾಡಬೇಕು ಎಂದು ಗುರಿ ಇದ್ದರೂ ೧೯೬ ಸಂಘಗಳನ್ನು ಮಾಡುವ ಗುರಿಯನ್ನು ನಾವು ಮುಟ್ಟಿದ್ದೇವೆ. ಮ್ಯಾನೇಜಿರಿಯಲ್ ಡಿಪಾರ್ಟ್‌ಮೆಂಟಲ್ ಹ್ಯಾಂಡ್ಸ್ ಮತ್ತು ಫಿನಾನ್‌ಷಿಯಲ್ ಬ್ಯಾಂಕ್ಸ್, ರಾಷ್ಟ್ರೀಕೃತ ಬ್ಯಾಂಕ್ಸ್ ಕೆಲವು ಜನ ಮ್ಯಾನೇಜಿಂಗ್ ಡೈರೆಕ್ಟರುಗಳನ್ನು ನೇಮಕ ಮಾಡಿದ್ದಾರೆ, ನಾವು ಕೂಡ ನೇಮಕ ಮಾಡಿದ್ದೇವೆ. ನೂರು ಸಹಕಾರ ಸಂಘಗಳಲ್ಲಿ ೮೩ ಆಡಳಿತ ಮಂಡಳಿಗಳಲ್ಲಿ ಅಧಿಕಾರಿಗಳನ್ನು ನಾವು ನೇಮಕ ಮಾಡಿದ್ದೇವೆ, ೧೭ ಸಹಕಾರ ಸಂಘಗಳಿಗೆ ಇನ್ನೂ ನೇಮಕ ಮಾಡಬೇಕಾಗಿದೆ.

ಇನ್ನೂ ೧೪ ಸಹಕಾರೀ ಸಂಘಗಳಿಗೆ ನೇಮಕ ಮಾಡಿಲ್ಲ. ಒಟ್ಟು ಸುಮಾರು ೪ ಕೋಟಿ ೬೦ ಲಕ್ಷ ರೂಪಾಯಿಯಷ್ಟು ಹಣವನ್ನು ಎಫ್.ಎಸ್.ಸಿ.ಎಸ್ ಗೆ ಮತ್ತು ಸಿರಿಕಲ್‌ಚರಲ್ ಸೊಸೈಟಿಗೆ ಸಾಲದ ವ್ಯವಸ್ಥೆ ಏನು ಮಾಡಬೇಕಾಗಿತ್ತೋ ಅದು ಹಿಂದೆ ಬಿದ್ದಿದೆ. ಈ ಬಗ್ಗೆ ನನ್ನ ಉದ್ದೇಶ ಹೇಳುವುದಾದರೆ ರೇಷ್ಮೆ ವ್ಯವಸಾಯ ಮಾಡತಕ್ಕಂಥಾ ಪ್ರತಿ ಕುಟುಂಬವನ್ನೂ ಗುರುತಿಸಿ ಅವರ ಸದಸ್ಯತ್ವವನ್ನು ಮಾಡಿಸ ಬೇಕು ಅಂತ ನನ್ನ ಉದ್ದೇಶ ಅಲ್ಲದೆ ಅವರಿಗೆ ಈ ಒಂದು ಸಾಲದ ವ್ಯವಸ್ಥೆಯನ್ನೂ ಅವರಿಗೆ ಒದಗಿಸ ಬೇಕು ಅನ್ನುವ ಉದ್ದೇಶ ಇದೆ. ಈ ಬಗ್ಗೆ ಕೆಲಸ ಮಾಡುವುದಕ್ಕೆ ನಾನು ಈಗಾಗಲೇ ಆದೇಶ ಕೊಟ್ಟಿದ್ದೇನೆ.

ಇನ್ನು ಬಹಳ ಸದಸ್ಯರು ವಸೂಲಿ ಬಗ್ಗೆ ತೊಂದರೆಯಾಗುತ್ತಾ ಇದೆ ಅನ್ನುವ ಮಾತನ್ನು ಹೇಳಿದ್ದಾರೆ. ಈ ವರ್ಷ ಮಳೆ ತೊಂದರೆಯಾದ್ದರಿಂದ ಹಾಲಿ ವಸೂಲಿ ಮಾಡತಕ್ಕಂಥಾ ಹಣದಲ್ಲಿ ಅದನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡತಕ್ಕಂಥಾ ಕೆಲಸವನ್ನು ಮಾಡಿದ್ದೇವೆ. ತಮಗೆ ಹೇಳಬೇಕಾದರೆ ಸುಮಾರು ೧೫ ಕೋಟಿ ರೂಪಾಯಿಯಷ್ಟು ಹಣದಲ್ಲಿ ೧೨ ಕೋಟಿ ರೂಪಾಯಿಯಷ್ಟು ಹಣವನ್ನು ಉಪಯೋಗ ಮಾಡಿಕೊಂಡಿದ್ದಾರೆ, ಈ ಬಗ್ಗೆ ನಮಗೆ ಕಮರ್ಷಿಯಲ್ ಬ್ಯಾಂಕ್ಸ್‌ನವರ ಬೆಂಬಲ ದೊರೆಯುತ್ತಾ ಇಲ್ಲ. ಅವರಿಗೆ ಈ ಬ್ಯಾಂಕುಗಳಿಂದ ಯಾವ ರೀತಿಯಾಗಿ ಸಾಲವನ್ನು ದೊರಕಿಸಿ ಕೊಡಬೇಕು ಅನ್ನುವ ಬಗ್ಗೆ ಕೇಂದ್ರದವರ ಜೊತೆಯಲ್ಲೂ ಮತ್ತು ರಿಸರ್ವ್ ಬ್ಯಾಂಕ್‌ನವರ ಜೊತೆಯಲ್ಲೂ ಪ್ರಸ್ತಾಪ ಮಾಡುತ್ತಾ ಇದ್ದೇವೆ.

ಇನ್ನು ಸಣ್ಣ ಹಿಡುವಳಿದಾರರ ಸಾಲದ ವ್ಯವಸ್ಥೆ ಬಗ್ಗೆ ಹೇಳುವುದಾದರೆ ಅವರಿಗೆ ಸುಮಾರು ೨೫ ಕೋಟಿ ರೂಪಾಯಿಯಷ್ಟು ಸಾಲವನ್ನು ಒದಗಿಸುವ ವ್ಯವಸ್ಥೆ ಮಾಡಿದ್ದೆವು. ಆದರೆ ಅವರಿಗೆ ಕೊಟ್ಟಿರ ತಕ್ಕಂಥಾ ಹಣ ನೋಡಿದರೆ ೧೦೦ಕ್ಕೆ ಕಾಲು ಭಾಗದಷ್ಟು ಮಾತ್ರ ಕೊಟ್ಟಿರುವುದನ್ನು ನಾವು ನೋಡುತ್ತಾ ಇದ್ದೇವೆ. ಅವರಿಗೆ ಅಷ್ಟು ಹಣವೂ ಸರಿಯಾಗಿ ಮುಟ್ಟಿಲ್ಲ.

ಇನ್ನು ಸಹಕಾರೀ ಕ್ಷೇತ್ರದಲ್ಲಿ ಈ ಉಗ್ರಾಣದ ವ್ಯವಸ್ಥೆ ಬಗ್ಗೆ ಹೇಳುವುದಾದರೆ ಇದನ್ನು ಕಟ್ಟುವುದಕ್ಕೆ ಬಹಳ ಅವಕಾಶ ಮಾಡಿಕೊಟ್ಟಿದ್ದೇವೆ. ಈವೊತ್ತು ರಾಜ್ಯದಲ್ಲಿರತಕ್ಕಂಥಾ ಈ ಒಂದು ಉಗ್ರಾಣದ ವ್ಯವಸ್ಥೆ ಬಗ್ಗೆ ಹೇಳುವುದಾದರೆ ಈ ವರ್ಷ ಸುಮಾರು ೪೭೦೦ ಉಗ್ರಾಣಗಳನ್ನು ಕಟ್ಟುವುದಕ್ಕೆ ಸ್ಯಾಂಕ್ಷನ್ ಆಗಿದ್ದುದರಲಿ ೩೨೪ ಉಗ್ರಾಣಗಳು ಪರಿಪೂರ್ಣವಾಗಿವೆ. ಇದರಲ್ಲಿ ೪,೬೩,೯೦೦ ಟನ್‌ಗಳಷ್ಟು ಧಾನ್ಯಗಳನ್ನು ಶೇಖರಣೆ ಮಾಡತಕ್ಕಂಥಾ ಒಂದು ವ್ಯವಸ್ಥೆ ಇದೆ. ಆದರೆ ಕೆಲವು ಸಹಕಾರೀ ಸಂಘಗಳನ್ನು ಉಗ್ರಾಣಗಳನ್ನು ಕಟ್ಟದೆ ಆ ದುಡ್ಡನ್ನು ವಾಪಸ್ಸು ಮಾಡಿತು. ಇದರಿಂದ ನಮಗೆ ೯೮,೨೦೦ ಟನ್ ಅಷ್ಟು ಧಾನ್ಯಗಳನ್ನು ಶೇಖರಣೆ ಮಾಡತಕ್ಕಂಥಾ ಒಂದು ಕೆಲಸಕ್ಕೆ ನಮಗೆ ಕುಂದುಂಟಾಗಿದೆ. ಇನ್ನೂ ೩೨೪ ಸಹಕಾರೀ ಸಂಘಗಳು ಈ ಉಗ್ರಾಣಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡದೇ ಇರುವುದರಿಂದ ೩೫,೦೦೦ ಟನ್ ಅಷ್ಟು ಧಾನ್ಯವನ್ನು ಶೇಖರಣೆ ಮಾಡುವುದಕ್ಕೆ ಆಗುತ್ತಾ ಇಲ್ಲ. ಇನ್ನು ೬೭೦ ಗೋಡೌನ್‌ಗಳು ಬೇರೆ ಬೇರೆ ಹಂತದಲ್ಲಿವೆ ಇದರಿಂದ ರೈತರಿಗೆ ಉಗ್ರಾಣದ ವ್ಯವಸ್ಥೆಗೆ ಸ್ವಲ್ಪ ಕುಂದುಂಟಾಗಿದೆ. ಇದನ್ನು ಸಮರ್ಪಕವಾಗಿ ಮಾಡಬೇಕು ಅನ್ನುವುದು ನನ್ನ ಉದ್ದೇಶವಾಗಿದೆ. ಈ ಉಗ್ರಾಣಗಳನ್ನು ಕಟ್ಟಿಸಬೇಕಾದರೆ ವೇರ್‌ಹೌಸಿಂಗ್ ಕಾರ್ಪೋರೇಷನ್ ಮುಖಾಂತರ ಮಾಡಬೇಕು ಅನ್ನುವ ಒಂದು ಅಭಿಪ್ರಾಯವೂ ಕೂಡ ಈವೊತ್ತಿನ ದಿವಸ ಇದೆ. ಏತಕ್ಕೆಂದರೆ ಹಳ್ಳಿಗಾಡಿನಲ್ಲಿ ರೈತರಿಗೆ ದವಸಧಾನ್ಯಗಳನ್ನು ಇಟ್ಟುಕೊಳ್ಳುವುದಕ್ಕೆ ಒಂದು ಸರಿಯಾದ ವ್ಯವಸ್ಥೆ ಇಲ್ಲ. ಅವರಿಗೆ ನಾವು ಈ ಬಗ್ಗೆ ಒಂದು ಸರಿಯಾದ ವ್ಯವಸ್ಥೆ ಮಾಡಿಕೊಟ್ಟರೆ ಅಂದರೆ ಅವರ ಮುಖಾಂತರ ಈ ಗೋಡೌನ್‌ಗಳು ಕಟ್ಟಿಸಿದರೆ ರೈತರು ಬೆಳೆದಂಥಾ ಧಾನ್ಯವನ್ನು ಈ ಗೋಡೌನ್‌ನಲ್ಲಿ ಇಟ್ಟು ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡು ತನ್ನ ಕೊರತೆಯನ್ನೂ ಕೂಡ ನೀಗಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿಯಾದ ಒಂದು ವ್ಯವಸ್ಥೆ ಮಾಡಬೇಕು ಎನ್ನುವ ವಿಚಾರ ಸರ್ಕಾರದ ಮನಸ್ಸಿನಲ್ಲಿ ಇದೆ. ಇದರಿಂದ ಆ ರೈತರು ದೊಡ್ಡ ಪ್ರಮಾಣದಲ್ಲಿ ಇಲ್ಲಿಗೆ ತಂದು ದಾಸ್ತಾನು ಮಾಡುವುದಕ್ಕೆ ಸಾಧ್ಯವಾಗುವುದಲ್ಲದೆ ಅವನು ಹೆಚ್ಚು ಹೆಚ್ಚು ಬೆಳೆಯುವುದಕ್ಕೂ ಕೂಡ ರೈತರಿಗೆ ಒಂದು ಪ್ರೋತ್ಸಾಹ ಕೊಟ್ಟಂತಾಗುತ್ತದೆ, ಈ ಒಂದು ದೃಷ್ಟಿಯಿಂದ ವೇರ್ ಹೌಸಿಂಗ್ ಕಾರ್ಪೋರೇಷನ್ ಮುಖಾಂತರ ಈ ಉಗ್ರಾಣಗಳನ್ನು ಕಟ್ಟಿಸಬೇಕು ಎನ್ನುವ ಅಭಿಪ್ರಾಯ ಸರ್ಕಾರದ ಮನಸ್ಸಿನಲ್ಲಿ ಇದೆ.

ಇನ್ನು ಆಡಿಟ್ ಬಗ್ಗೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮತ್ತು ಇನ್ನೂ ಬಹಳ ಸದಸ್ಯರು ಹೇಳಿದ್ದಾರೆ. ಈ ಆಡಿಟ್ ವಿಭಾಗವನ್ನು ನಾವು ಪ್ರತ್ಯೇಕ ಮಾಡಿದ್ದೇವೆ. ಅಲ್ಲಿ ಇರುವ ನೌಕರರಲ್ಲಿ ಎಷ್ಟು ಜನ ಇಲ್ಲಿಗೆ ಬರುತ್ತಾರೆ ಎಂದು ನಾವು ಆಪ್ಷನ್ ಕೇಳಿದ್ದೇವು ಈ ಒಂದು ಆಡಿಟ್ ವ್ಯವಸ್ಥೆಗೆ ಸುಮಾರು ೧೫೦೦ ಜನ ಬೇಕಾಗುತ್ತದೆ. ಅದರಲ್ಲಿ ಸುಮಾರು ೯೪೮ ಜನರನ್ನು ಒಪ್ಪಿಗೆ ಕೊಟ್ಟಿದ್ದಾರೆ. ಮಿಕ್ಕವರನ್ನು ನಾವು ನೇಮಕ ಮಾಡಬೇಕಾಗುತ್ತದೆ.

ಇನ್ನು ಕೆಲವು ಸದಸ್ಯರು ಸಹಕಾರೀ ಸಂಘಗಳಲ್ಲಿ ಆಡಿಟ್ ಮಾಡಬೇಕಾಗಿರುವುದು ಬಹಳಷ್ಟು ಉಳಿದಿದೆ ಅನ್ನುವ ಮಾತನು ಹೇಳಿದರು. ಈ ಬಗ್ಗೆ ತಮಗೆ ಒಂದು ವಿವರಣೆಯನ್ನು ಕೊಡಲಿಚ್ಛಿಸುತ್ತೇನೆ ಈವೇ ವರೆಗೆ ೨೧, ೭೬೧ ಸೊಸೈಟಿಗಳು ಆಡಿಟ್ ಆಗಬೇಕಾಗಿತ್ತು; ಅದರಲ್ಲಿ ೧೫ ಸಾವಿರ ಸಂಘಗಳು ಆಡಿಟ್ ಆಗಿವೆ. ಇದರ ಒಂದು ಅಂಕಿ ಅಂಶ ಹೇಳುವುದಾದರೆ ಒಂದು ವರ್ಷದ್ದು, ಎರಡು ವರ್ಷದ್ದು, ೩ ವರ್ಷದ್ದು, ೪ ವರ್ಷದ್ದು ಮತ್ತು ೫ ರಿಂದ ೧೦ ವರ್ಷದ್ದು ಆಡಿಟ್ ಆಗಿರಬೇಕಾಗಿರುವ ವಿವರಗಳು ಹೇಳುವುದಕ್ಕೆ ಬಯಸುತ್ತೇನೆ. ಒಂದು ವರ್ಷದ ಆಡಿಟ್ ಆಗಬೇಕಾಗಿರುವ ಸಹಕಾರೀ ಸಂಘಗಳು ೫೩೫ ಇವೆ, ಎರಡು ವರ್ಷದಲ್ಲಿ ಆಡಿಟ್ ಆಗಬೇಕಾಗಿರುವ ಸಹಕಾರೀ ಸಂಘಗಳು ೫೪೭ ಇವೆ, ಮೂರು ವರ್ಷದಲ್ಲಿ ಆಡಿಟ್ ಆಗಬೇಕಾಗಿರುವ ಸಹಕಾರೀ ಸಂಘಗಳು ೨೭೦ ಇವೆ, ನಾಲ್ಕು ವರ್ಷದಲ್ಲಿ ಆಡಿಟ್ ಆಗಬೇಕಾಗಿರುವ ಸಹಕಾರೀ ಸಂಘಗಳು ೧೬೬ ಇವೆ, ಹಾಗೆಯೇ ೫ ರಿಂದ ೧೦ ವರ್ಷದ್ದು ಆಡಿಟ್ ಆಗಬೇಕಾಗಿರುವ ಸಹಕಾರೀ ಸಂಘಗಳು ೪೨೬ ಇವೆ. ಇದರಲ್ಲಿ ಏನು ತೊಂದರೆ ಇದೆ ಅನ್ನುವುದನ್ನು ತಾವೆಲ್ಲಾ ನೋಡಿದ್ದೀರಿ ಎಷ್ಟೋ ಸಂಘಗಳಲ್ಲಿ ಹಣ ದುರುಪಯೋಗವಾಗಿ ಅವು ಕೋರ್ಟಿನಲ್ಲಿರುವ ಸಂದರ್ಭ ಉಂಟು. ಅದಕ್ಕೆ ಬೇಕಾದ ದಾಖಲೆಗಳು ಅವುಗಳು ಸಿಗುವುದು ಒಂದೊಂದು ಸಲ ತೊಂದರೆಯಾಗುತ್ತದೆ ಅದುದರಿಂದ ಅದನ್ನು ಆಡಿಟ್ ಮಾಡುವುದು ಸ್ವಲ್ಪ ನಿದಾನವಾಗುತ್ತದೆ. ಶ್ರೀಮಾನ್ ಸಿ. ಬೈರೇಗೌಡರು ಮತ್ತು ಶ್ರೀಮಾನ್ ಅಮ್ಮಣ್ಣನವರ್ ಅವರು ಈ ಬಗ್ಗೆ ಪ್ರಸ್ತಾಪ ಮಾಡಿದರು ಈವೊತ್ತು ಇಂಥಾ ಸೊಸೈಟಿಗಳನ್ನು ಆಡಿಟ್ ಮಾಡಬೇಕಾದರೆ ಕೋರ್ಟಿನವರ ಅಪ್ಪಣೆ ತೆಗೆದುಕೊಂಡು ಆಡಿಟ್ ಮಾಡತಕ್ಕಂಥಾ ವ್ಯವಸ್ಥೆ ಮತ್ತು ಎನ್‌ಕ್ವೈರಿ ಮಾಡತಕ್ಕಂಥಾ ವ್ಯವಸ್ಥೆ

ಆಗಬೇಕಾಗಿದೆ. ಆ ದಿಸೆಯಲ್ಲಿ ನಾವು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಮತ್ತು ಆ ಕೆಲಸ ನಡೆಯುತ್ತಾ ಇದೆ. ಮಾನ್ಯ ಅಧ್ಯಕ್ಷರೇ ಈ ಆಡಿಟ್ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳುತ್ತೇನೆ. ಇನ್ನು ಇದಕ್ಕೆ ಬೇಕಾದಂಥಾ ಸಿಬ್ಬಂದಿ ವರ್ಗ ಮಾಡಬೇಕಾಗಿದೆ. ಕಾನೂನು ಪ್ರಕಾರ ಅದಕ್ಕೆ ಬೇರೆ ವ್ಯವಸ್ಥೆ ಮಾಡಬೇಕಾಗಿದೆ. ಇದಕ್ಕೆ ಮೇಲ್ವಿಚಾರಣೆಗೆ ಕೆಲವು ಆಫೀಸರ್ಸ್‌ಗಳನ್ನು ಕೊಡಬೇಕು ಎಂದು ನಾವು ಅಕೌಂಟೆಂಟ್ ಜನರಲ್‌ರವರಿಗೆ ಬರೆದಾಗ ಅವರು ನಾವು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಇದಕ್ಕೆ ರಿಟೈರ್ಡ್ ಆದವರನ್ನು ತೆಗೆದುಕೊಂಡರೆ ಅವರ ಸಂಬಳ ವಗೈರೆ ಖರ್ಚು ಜಾಸ್ತಿಯಾಗುತ್ತದೆ. ಆದುದರಿಂದ ಇದನ್ನು ಹೇಗೆ ಮಾಡಬೇಕು ಅನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ ಇಲ್ಲವೇ ಇದಕ್ಕೆ ತಾತ್ವಿಕವಾಗಿಯಾದರೂ ಬೇರೆ ಒಂದು ವ್ಯವಸ್ಥೆ ಮಾಡಬೇಕೇ ಅನ್ನು ಈ ಸಭೆಯ ಗಮನದಲ್ಲಿದೆ ಅನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ರಿಟ್ ಬಗ್ಗೆ ಹೇಳಿದ್ದಾರೆ. ರಿಟ್ ಇರುವುದು ೫೯೯ ಸಹಕಾರೀ ಸಂಘಗಳು ಮಾತ್ರ ರಿಟ್ ಹಾಕಿರತಕ್ಕಂಥಾ ಸಹಕಾರೀ ಸಂಘಗಳಲ್ಲಿ ಹಣದ ವ್ಯವಸ್ಥೆ ಸರಿಯಾಗಿ ಇಲ್ಲ, ಮತ್ತು ಸಾಲದ ವಿತರಣೆಗೂ ಕೂಡ ತೊಂದರೆಯಾಗಿದೆ ಅನ್ನುವ ಮಾತನ್ನು ಮಾನ್ಯ ಸದಸ್ಯರು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ಶಂಕೆಗೆ ಕಾರಣ ಇಲ್ಲ, ಈ ಬಗ್ಗೆ ಅನುಮತಿಯನ್ನು ಕೊಟ್ಟಿದ್ದೇವೆ ಅನ್ನುವ ಮಾತನ್ನು ಹೇಳುತ್ತೇನೆ. ಆಯಾಯಾ ಜಿಲ್ಲಾ ಬ್ಯಾಂಕ್‌ಗಳಿಗೆ ಸಂಬಂಧಪಟ್ಟಂತೆ ಆ ಹಳ್ಳಿಗಳಲ್ಲಿ ಯಾವ ಯಾವ ಸಹಕಾರ ಸಂಘಗಳು ಇವೆಯೋ ಸಂಬಂಧಪಟ್ಟವರು ಆ ರೈತರಿಗೆ ಸಾಲ ಕೊಡಬೇಕು ಅನ್ನುವ ಒಂದು ಆದೇಶವನ್ನು ಕೊಟ್ಟಿದ್ದೇವೆ. ಅವರು ಅದರಂತೆ ಏರ್ಪಾಡು ಮಾಡುತ್ತಾರೆ.

ಶ್ರೀ ಸಿ. ಬೈರೇಗೌಡ.—ಕಮರ್ಷಿಯಲ್ ಬ್ಯಾಂಕ್ಸ್‌ನಲ್ಲಿ ಕೊಡಿಸುವುದಕ್ಕಾಗುವುದಿಲ್ಲವೇ?

ಶ್ರೀ ಕೆ. ಹೆಚ್. ರಂಗನಾಥ್ —ಅದು ನನ್ನ ಕೈಯಲ್ಲಿ ಇಲ್ಲ. ಪ್ರಯತ್ನ ಮಾಡೋಣ ಇನ್ನು ಕೋಆಪರೇಟೀವ್ ಫಾರ್ಮಿಂಗ್ ಸೊಸೈಟಿ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಹೊರಕೇರಿಯವರು ಪ್ರಸ್ತಾಪ ಮಾಡಿದ್ದಾರೆ. ಆ ಬಗೆ ನಾನು ಹೇಳುವುದಾದರೆ ಒಟ್ಟು ೬೮೬ ಕೋಆಪರೇಟೀವ್ ಫಾರ್ಮಿಂಗ್ ಸೊಸೈಟಿಗಳಲ್ಲಿ ೩೬೬ ಸರಿಯಾಗಿ ನಡೆಯುತ್ತಾ ಇದೆ. ಇನ್ನು ೩೨೦ ಸೊಸೈಟಿ ಸರಿಯಾಗಿ ನಡೆಯುತ್ತಾ ಇಲ್ಲ. ಇದರಲ್ಲಿ ಕೆಲವರು ಸರ್ಕಾರದ ಭೂಮಿಯನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಅದಕ್ಕೆ ಬೇರೆ ಬೇರೆ ಕಾರಣಗಳು ಇವೆ. ನಾವು ಇದರಲ್ಲಿ ಸ್ವಲ್ಪ ಹಣವನ್ನು ತೊಡಗಿಸಿದ್ದೇವೆ. ಈ ಬಗ್ಗೆ ಬೇಕಾದರೆ ಅಂಕಿ ಅಂಶಗಳನ್ನು ಕೊಡಬಲ್ಲೆ. ಆದರೆ ಕಾಲಾವಕಾಶ ಇಲ್ಲ. ಶ್ರೀಮಾನ್ ಹೊರಕೇರಿಯವರು ಹೇಳಿದ ಹಾಗೆ ಇದು ನಮ್ಮ ವರೆಗೂ ಬಂದು ಮುಟ್ಟಿಲ್ಲ. ಇದರಲ್ಲಿ ಯಾವ ಜನರಿಗೆ ಆಸಕ್ತಿ ತೋರಿಸಬೇಕಾಗಿತ್ತೋ ಆ ಜನರಿಗೆ ಇದು ಮುಟ್ಟಿಲ್ಲ ಮತ್ತು ಇದರ ಬಗ್ಗೆ ಸರ್ಕಾರದವರೂ ಸಹ ಮೇಲ್ವಿಚಾರಣೆ ನೋಡಿಕೊಳ್ಳುದರಲ್ಲಿ ತಪ್ಪು ಮಾಡಿದ್ದಾರೆ ಅನ್ನುವುದನ್ನು ಗಮನಿಸಬೇಕಾಗಿದೆ. ಆದರೆ ಇದರಲ್ಲಿ ಒಂದು ವಿಚಾರ ಏನೆಂದರೆ ಲ್ಯಾಂಡ್ ರೀಫಾರಂಸ್ ಆಕ್ಟ್ ಬಂದಮೇಲೆ ಈ ಕೋಆಪರೇಟೀವ್ ಫಾರ್ಮಿಂಗ್ ಸೊಸೈಟಿಯನ್ನು ಸರ್ಕಾರದ ವತಿಯಿಂದ ಕೊಟ್ಟಿರುವುದನ್ನು ಇಟ್ಟುಕೊಳ್ಳಬೇಕಾಗಿದೆ. ಹಾಗೆ ಇಟ್ಟುಕೊಳ್ಳುವುದಕ್ಕೆ ಸಾಧ್ಯವೇ ಅನ್ನುವುದನ್ನು ನಾವು ವಿಚಾರ ಮಾಡಬೇಕಾಗಿದೆ. ಅವರ ಹೆಸರಿನಲ್ಲಿರುವ ಜಮೀನನ್ನು ಬೇರೆಯವರು ಸಾಗುವಳಿ ಮಾಡುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಸಹಕಾರೀ ಸಂಘಗಳಲ್ಲಿ ಸದಸ್ಯರಾಗಿರುವವರು ಎಲ್ಲಿಯೋ ಕೂಲಿ ಕೆಲಸ ಮಾಡಿಕೊಂಡಿರುತ್ತಾರೆ. ಆ ಸದಸ್ಯರ ಹೆಸರಿನಲ್ಲಿರುವ ಜಮೀನನ್ನು ಮತ್ಯಾರೋ ಸಾಗುವಳಿ ಮಾಡುತ್ತಿರುವುದೂ ಸಹ ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ಸಹ ನಾವು ಗಣನೆಗೆ ತೆಗೆದುಕೊಂಡು ಯಾವ ರೀತಿ ಸರಿಪಡಿಸಬೇಕೆಂಬುದನ್ನು ವಿಚಾರ ಮಾಡಿ ನೋಡಬೇಕಾಗಿದೆ. ಈಗ ಈ ಸಹಕಾರಿ ಸಂಘಗಳಿಗೆ ಒಟ್ಟಾಗಿ ಜಮೀನನ್ನು ಮಂಜೂರು ಮಾಡಿದ್ದೇವೆ. ಅದರ ಬದಲು ಪ್ರತಿಯೊಬ್ಬರ ಹೆಸರಿಗೂ ಭೂಮಿಯ ಒಡೆತನ ಕೊಡುವುದು ಒಳ್ಳೆಯದೆಂಬ ಅಭಿಪ್ರಾಯವೂ ಸಹ ಇದೆ. ಇದನ್ನು ಸಹ ತೀವ್ರವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಇನ್ನು ಮಿಸ್-ಅಪ್ರೋಪ್ರಿಯೇಷನ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪಿ. ಎ. ಸಿ. ಅವರು ಏನು ಹೇಳಿದ್ದಾರೆ? ಅದರ ಕಡೆಗೆ ಗಮನಕೊಡುತ್ತಿಲ್ಲವೆಂದು ಸಹ ಹೇಳಿದ್ದಾರೆ. ಆದರೆ ನನ್ನ ಖಾತೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ನಾವು ಎಲ್ಲ ಕ್ರಮವನ್ನೂ ತೆಗೆದುಕೊಂಡಿದ್ದೇವೆ.

ಸಮಯದ ಅಭಾವದಿಂದ ಎಲ್ಲ ವಿವರಗಳನ್ನು ಈ ಬಗ್ಗೆ ಹೇಳಲು ಹೋಗುವುದಿಲ್ಲ. ಮಾನ್ಯ ಸದಸ್ಯರು ತಿಪಟೂರು ಸೊಸೈಟಿಯ ವಿಚಾರ ಹೇಳಿದರು. ಒಟ್ಟಿನಲ್ಲಿ ಯಾವ ಯಾವ ಸೊಸೈಟಿಯ ಬಗ್ಗೆ ಪಿ ಎ ಸಿ ಯಲ್ಲಿ ಪ್ರಸ್ತಾಪ ಮಾಡಿದ್ದಾರೆ ಅವೆಲ್ಲದರ ಬಗ್ಗೆಯೂ ನಮ್ಮ ಇಲಾಖೆಯವರು ಕ್ರಮ ಕೈಕೊಂಡಿದ್ದಾರೆ. ಮತ್ತು ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ನಮ್ಮಲ್ಲಿ ಮಿಸ್-ಅಪ್ರೋಪ್ರಿಯೇಷನ್ ಕೇಸ್‌ಗಳು ಎಷ್ಟಿವೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ತರಿಸಿಕೊಂಡು ಸಂಬಂಧ ಪಟ್ಟವರ ಮೇಲೆ ಕ್ರಿಮಿನಲ್ ಕೇಸ್ ಇಲ್ಲವೇ ಸಿವಿಲ್ ದಾವಾ ಹಾಕುವುದರ ಮೂಲಕ ಹಣದ ವಸೂಲಿ ಮಾಡುವ ಕೆಲಸ ಕೈಕೊಂಡಿದ್ದೇವೆ. ಈಗ 2 ಕೋಟಿ 27 ಲಕ್ಷದ 83 ಸಾವಿರದಷ್ಟು ಹಣ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಇದರಲ್ಲಿ 36 ಲಕ್ಷ ರೂ.ಗಳು ಮಾತ್ರ ವಸೂಲಿಯಾಗಿರುವುದು. ಇನ್ನೂ ಒಂದು ಕೋಟಿ 92 ಲಕ್ಷದ 58 ಸಾವಿರ ರೂಪಾಯಿಗಳು ವಸೂಲಿಯಾಗಬೇಕಾಗಿದೆ. ಕೆಲವರು ಕ್ರಿಮಿನಲ್ ಕೇಸ್ ಹಾಕಿದರೆ ಒಳ್ಳೆಯದೆಂದು ಹೇಳುವವರೂ ಇದ್ದಾರೆ. ವಾಯಿದೆ ಮೀರಿದರೆ ಅಪೀಲು ವಜಾ ಆಗುತ್ತದೆಂದು ಹೇಳುವವರೂ ಇದ್ದಾರೆ. ಆದ್ದರಿಂದ ನಾವು ಸಿವಿಲ್ ದಾವ ಹಾಗೂ ಕ್ರಿಮಿನಲ್ ದಾವ ಎರಡನ್ನೂ ಹಾಕಿ ಹಣ ವಸೂಲಿ ಮಾಡುವ ಕ್ರಮ ಕೈಕೊಂಡಿದ್ದೇವೆ.

ಇನ್ನು ಎಸ್ ಸಿ ಮತ್ತು ಎಸ್.ಟಿ. ಗಳಿಗೆ ಮನೆ ಕಟ್ಟಿಸಿಕೊಡುವ ಬಗ್ಗೆ ಇಂತಹಂಥ ಸಹಕಾರ ಸಂಘಗಳ ಬಗ್ಗೆ ನನ್ನ ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಹಿಂದೆ ಯಾರು ತಾಲ್ಲೂಕ್ ಬೋರ್ಡಿನ ಅಧ್ಯಕ್ಷರಾಗಿರುತ್ತಿದ್ದರೋ ಅವರೇ ಈ ಸೊಸೈಟಿಗಳ ಅಧ್ಯಕ್ಷರೂ ಆಗಿರುತ್ತಿದ್ದರು. ಇದಕ್ಕೆ ಅವಕಾಶವಿಲ್ಲದಿದ್ದರೂ ಸಹ ಅದೇ ರೀತಿ ನಡೆದುಕೊಂಡು ಬರುತ್ತಿದೆ. ಮಾನ್ಯ ಚೆನ್ನಪ್ಪಗೌಡರು ಮಾಗಡಿ ತಾಲ್ಲೂಕ್ ಬಗ್ಗೆ ಪ್ರಸ್ತಾಪ ಮಾಡಿ ಅಲ್ಲಿ 40 ಸಾವಿರ ರೂಪಾಯಿಗಳಷ್ಟು ಹಣ ದುರುಪಯೋಗವಾಗಿದೆ ಎಂದು ಹೇಳಿದರು.

ಶ್ರೀ ಎಚ್. ಬಿ. ಚೆನ್ನಪ್ಪ.—ಈ ಬಗ್ಗೆ ಅವರು ಇಲ್ಲಸಲ್ಲದ ಮಾತುಗಳನ್ನು ಆಡಿದ್ದಾರೆ ಅಲ್ಲಿ ಹಣದ ದುರುಪಯೋಗವಾಗಿಲ್ಲ. ಏಕೆಂದರೆ ಅಲ್ಲಿ ನಾನು ಪ್ರೆಸಿಡೆಂಟ್ ಆಗಿದ್ದೆ.

ಶ್ರೀ ಕೆ. ಎಚ್. ರಂಗನಾಥ್.—ಅವರು ಹೇಳಿದ್ದು ಸತ್ಯಕ್ಕೆ ದೂರವಾಗಿದೆ. ಅಲ್ಲಿ ಒಬ್ಬ ಗುಮಾಸ್ತರು 7 ಸಾವಿರ ರೂಪಾಯಿಗಳನ್ನು ದುರುಪಯೋಗ ಮಾಡಿಕೊಂಡಿದ್ದರು. ಅದನ್ನು ವಾಪಸ್ ಕಟ್ಟಿಸಿಕೊಳ್ಳುವ ಕೆಲಸವಾಗಿದೆ.

ಇನ್ನು ಮಾನ್ಯ ಸದಸ್ಯರು ಋಣಪರಿಹಾರ ಕಾಯಿದೆಗೆ ಪರ್ಯಾಯವಾಗಿ ಏನು ಮಾರ್ಗ ಕಂಡು ಹಿಡಿದಿದ್ದೀರಿ ಎಂದು ಕೇಳಿದ್ದಾರೆ. 125 ರೂಪಾಯಿಗಳ ಕನ್‌ಜಮ್‌ಷನ್ ಲೋನ್ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಅದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. 10 ಲಕ್ಷ ಸಣ್ಣ ಹಿಡುವಳಿದಾರರು ಇದರೊಳಗೆ ಬರುತ್ತಾರೆ. ಈಗಾಗಲೇ 2 ಲಕ್ಷ 70 ಸಾವಿರ ಜನ ಅಗ್ರಿಕಲ್ಚರಲ್ ಲೇಬರರ್ಸ್ ಇದರ ವ್ಯಾಪ್ತಿಯೊಳಗೆ ಸದಸ್ಯತನವನ್ನು ಹೊಂದಿದ್ದಾರೆ. ಪ್ರತಿ ಸಹಕಾರ ಸಂಘಗಳ ಮೂಲಕ ಈ ಹಣವನ್ನು ಕೊಡಬೇಕೆಂದಿದ್ದೇವೆ. ಎಲ್ಲೆಲ್ಲಿ ಪೇಡ್-ಸೆಕ್ರೆಟರಿಗಳಿದ್ದಾರೆ ಅಲ್ಲಿ ಮೊದಲು ಕೊಡಲಾಗುತ್ತದೆ. ಫಾರ್ಮರ್ಸ್ ಕೋಅಪರೇಟಿವ್ ಸೊಸೈಟಿಗಳ ಮೂಲಕ, ಸಿರಿಕಲ್ಚರಲ್ ಸೊಸೈಟಿಗಳ ಮೂಲಕ ಈ ಹಣವನ್ನು ಕೊಡಬೇಕೆಂದು ವಿಚಾರ ಮಾಡಿ ಈಗಾಗಲೇ 2 ಸಾವಿರ ರೂಪಾಯಿಗಳನ್ನು ರಿವಾಲ್ವಿಂಗ್ ಫಂಡ್ ತರಹ ಇಟ್ಟುಕೊಳ್ಳಬೇಕೆಂದು 70 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ಸಹಕಾರ ಸಂಘಗಳ ಮೂಲಕ ಎಲ್ಲರಿಗೂ ಕನ್‌ಜಮ್‌ಷನ್ ಲೋನ್ ಕೊಟ್ಟರೆ, ಅದು 5—6 ಕೋಟಿ ರೂಪಾಯಿಗಳಷ್ಟಾಗುತ್ತದೆ.

ಇನ್ನು ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಅಗ್ರಿಕಲ್ಚರಲ್ ಇನ್‌ಟೆನ್‌ಸೀವ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಎಂದು ಹೊಸದಾಗಿ ಇಂಟ್ರೊಡ್ಯೂಸ್ ಮಾಡಿದ್ದೇವೆ. ಇದರ ಪ್ರಕಾರ ಸಹಕಾರಿ ಕ್ಷೇತ್ರದ ವ್ಯಾಪ್ತಿಯೊಳಗೆ ಬಂದಂಥ ಪ್ರತಿ ಆರ್ಟಿಜಾನ್‌ಗೆ, ಕೂಲಿಗಾರರಿಗೆ, ವ್ಯವಸಾಯಗಾರರಿಗೆ ಒಂದಲ್ಲ ಒಂದು ರೀತಿಯ ಸಾಲದ ವ್ಯವಸ್ಥೆ ಮಾಡಿ ಅವರಿಗೆ ಸಹಾಯ ಮಾಡಬೇಕೆಂದಿದ್ದೇವೆ. ಈಗ ಎಲ್ಲೆಲ್ಲಿ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ವ್ಯವಸ್ಥೆ ಇಲ್ಲ ಅಲ್ಲೆಲ್ಲಾ ಹೈನುಗಾರಿಕೆಗೆ ಅವಕಾಶ ಮಾಡಿಕೊಡಬೇಕೆಂದಿದ್ದೇವೆ. ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ ಇಲ್ಲೆಲ್ಲಾ ಅಮೂಲ್ ಡೈರಿ ತರಹ ಕಾರ್ಯಕ್ರಮ ಹಾಕಿಕೊಂಡು, ಅಂದರೆ ಇಲ್ಲೆಲ್ಲಾ ಹಾಲನ್ನು

ಶೇಖರಣೆ ಮಾಡಿ ಬೇರೆ ಕಡೆಗೆ ಅದನ್ನು ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತೇವೆ. ಇದರಿಂದ ಯಾರು ಸಹಕಾರ ಸಂಘಗಳ ಮೂಲಕ ಸಾಲ ಪಡೆದಿರುತ್ತಾರೆ, ಅದನ್ನು ವಾಪಸ್ ಮಾಡುವುದಕ್ಕೂ ಅವರಿಗೆ ಸಹಾಯವಾಗುತ್ತದೆ.

ಇನ್ನು ಭೂ ಅಭಿವೃದ್ಧಿ ಬ್ಯಾಂಕ್‌ಗಳ ಮುಖಾಂತರ ಪ್ರತಿಯೊಂದು ರೈತ ಕುಟುಂಬಕ್ಕೂ ಗಾಡಿ ಮತ್ತು ಎತ್ತುಗಳನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ಕೆಲವು ಕಡೆ ಮಳೆ ಸಕಾಲದಲ್ಲಿ ಬರುವುದಿಲ್ಲ, ಅಂತಹ ಕಡೆಗಳಲ್ಲಿ ಸಾಯಿಲ್ ಕನ್ಸರ್‌ವೇಷನ್‌ಗಾಗಿ ನಾವು ಎಷ್ಟೋ ಹಣವನ್ನು ಖರ್ಚು ಮಾಡಿದ್ದೇವೆ. ಆ ಹಣವನ್ನು ವಾಪಸ್ ಕೊಡುವ ಶಕ್ತಿ ಸಂಬಂಧಪಟ್ಟ ರೈತರಿಗೆ ಇರುವುದಿಲ್ಲ. ಇಂತಹ ರೈತರಿಗೆ ಆರ್ಟಿಕಲ್ಚರಲ್ ಪ್ರೋಗ್ರಾಮ್‌ನಲ್ಲಿ ಸಪೋಟಾ ಬೆಳೆಯಲು ಸಾಲದ ವ್ಯವಸ್ಥೆ ಮಾಡಬೇಕೆಂದಿದ್ದೇವೆ ಸಪೋಟಾ ಬೆಳೆಯುವವರಿಗೆ ಹಾಗೂ ಕುರಿ ಸಾಕುವವರಿಗೆ ಭೂ ಅಭಿವೃದ್ಧಿ ಬ್ಯಾಂಕ್ ಮೂಲಕವೇ ಸಾಲ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ.

ಇನ್ನು ಮಾನ್ಯ ಪುಟ್ಟಸ್ವಾಮಿಯವರು ಸ್ವಲ್ಪ ಕಟುವಾಗಿ ನೇಮಕ ಮಾಡುವುದರ ಬಗ್ಗೆ ಹೇಳಿದರು. ನನಗೂ ಕೂಡ ಎಲ್ಲ ಸಹಕಾರ ಸಂಘಗಳಲೂ ಕೈಹಾಕಬೇಕೆಂಬ ಇಚ್ಛೆ ಇಲ್ಲ. ಮಾನ್ಯ ಲಿಂಗಪ್ಪನವರು ಸಹಕಾರ ಸಂಘದ ಬಗ್ಗೆ ಅವರು ಪ್ರಸ್ತಾಪ ಮಾಡಿದರು. ಅದು ಹೇಗೆ ನಡೆದಿದೆ ಎಂಬುದು ನನಗೆ ಗೊತ್ತಿಲ್ಲ ಏಕೆಂದರೆ ನನ್ನ ಸಹಿ ಇಲ್ಲದೆ ಆ ರೀತಿ ಹಾಕುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅದನ್ನು ತರಿಸಿ ನೋಡುತ್ತೇನೆ ಅವು ಉತ್ತಮವಾಗಿ ಕೆಲಸ ಮಾಡತಕ್ಕಂಥ ಸಹಕಾರ ಸಂಘಗಳಾಗಿವೆ ಎಂಬುದು ನಿರ್ವಿವಾದ. ಕನ್ಸ್ಯೂಮರ್ ಫೆಡರೇಷನ್‌ಗೆ ನೇಮಕ ಮಾಡಿರುವುದರ ಬಗ್ಗೆ ಅವರು ಒಂದು ಮಾತನ್ನು ಕಟುವಾಗಿ ಹೇಳಿದರು. Government refused to learn ಎಂದು ಹೇಳಿದರು. ಆದರೆ ಸರ್ಕಾರದ ವಿಚಾರ ಅದಲ್ಲ. ತಾವು ಇಲ್ಲಿ ಏನು ಟೀಕೆ ಮಾಡುತ್ತೀರಿ, ಆ ಬಗ್ಗೆ ಕ್ರಮವನ್ನು ಕೈಕೊಳ್ಳುವುದರ ಮೂಲಕ ಅದನ್ನು ಆದಷ್ಟು ಸರಿ ಮಾಡಬೇಕೆಂಬುದೇ ನಮ್ಮ ಉದ್ದೇಶವಾಗಿದೆ. ಆದರೆ ಯಾರನ್ನೋ ಪ್ರೆಸಿಡೆಂಟ್ ಮಾಡುವುದಕ್ಕಾಗಿ ಈ ರೀತಿ ನಾಮಕರಣ ಮಾಡಿದ್ದೀರಿ ಎಂದು ಅವರು ಹೇಳಿದರು ಈಗ ನಾಮಕರಣ ಮಾಡಿದ್ದಾಗಿದೆ. ಈ ಬಗ್ಗೆ ಹೇಳಬೇಕೆಂದರೆ ಸೆಕ್ಷನ್ 53 (ಎ) ಪ್ರಕಾರ ಸೆಕ್ಷನ್ 29ರ ಪ್ರಕಾರ, ಮತ್ತು ಬೈಲಾ ಪ್ರಕಾರ ನಾಮಕರಣ ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇದೆ. ಚುನಾಯಿತರಾದಂಥ ಸದಸ್ಯರ ಸಂಖ್ಯೆ ಎಷ್ಟಿರುತ್ತದೋ ಅದರ ಮೂರನೇ ಒಂದರಷ್ಟು ಸದಸ್ಯರನ್ನು ನಾಮಕರಣ ಮಾಡಬೇಕೆಂದು 53(ಎ)ನಲ್ಲಿ ಹೇಳಿದೆ. ಇದು ಹೈಕೋರ್ಟಿಗೂ ಸಹ ಹೋಗಿತ್ತು. ಅಲ್ಲಿ ಸರ್ಕಾರ ಮಾಡಿರುವುದು ಸರಿ ಎಂದು ತೀರ್ಮಾನವಾಯಿತು. ಅಂದಾಕ್ಷಣ ಎಲ್ಲದರಲ್ಲಿಯೂ ಸರ್ಕಾರ ಕೈಹಾಕುತ್ತದೆಂದು ತಾವು ತಿಳಿಯಬಾರದು. ಅದು ಸರ್ಕಾರದ ಭಾವನೆಯೂ ಅಲ್ಲ. ಈಗ ಸೆಕ್ಷನ್ 29ನ್ನು ಉಳಿಸಿಕೊಳ್ಳಬೇಕೇ ಅಥವಾ ಬೇಡವೇ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಮತ್ತು ಬೈಲಾ ಪ್ರಕಾರ ನಾಮಕರಣ ಮಾಡುವುದನ್ನು ಉಳಿಸಿಕೊಳ್ಳಬೇಕೇ ಅಥವಾ ಬೇಡವೇ ಎಂಬುದನ್ನು ಸಹ ವಿಚಾರ ಮಾಡಬೇಕಾಗಿದೆ. ಇಂದು ಸಹಕಾರ ಕ್ಷೇತ್ರದಲ್ಲಿ ಏನಾಗಿದೆ ಎಂದರೆ, ನಾವು ಸರ್ಕಾರದಿಂದ ಕೋಟಿಗಟ್ಟಲೆ ಹಣವನ್ನು ಇದರಲ್ಲಿ ಹಾಕುವಾಗ, ಅದು ಸರಿಯಾಗಿ ವಿನಿಯೋಗವಾಗುತ್ತಿದೆಯೋ ಅಥವಾ ಇಲ್ಲವೇ ಎಂಬುದನ್ನು ನೋಡಬೇಕಾಗಿದೆ. ಆದ್ದರಿಂದ ಸರ್ಕಾರಕ್ಕೆ ನಂಬಿಕೆ ಇರತಕ್ಕಂಥ ಮತ್ತು ವಿಚಕ್ಷಣೆಯಿಂದ ಕೆಲಸ ಮಾಡತಕ್ಕಂಥವರನ್ನು ನಾಮಕರಣ ಮಾಡಬೇಕಾಗುತ್ತದೆ. ಆದರೆ ಇದರಲ್ಲಿ ರಾಜಕೀಯ ಇದೆ ಎಂದು ಹೇಳುತ್ತಾರೆ. ನಾನು ಸ್ವಯಂಪ್ರೇರಿತನಾಗಿ ಯಾವ ಸೊಸೈಟಿಯ ಆಡಳಿತದಲ್ಲಿಯೂ ಕೈ ಹಾಕುವುದಕ್ಕೆ ಹೋಗಿಲ್ಲ. ಮತ್ತು ಯಾವ ಸೊಸೈಟಿಯಲ್ಲಿಯೂ ನನ್ನ ನೆಂಟರಾಗಲೀ, ನನ್ನ ಸಂಬಂಧೀಕರಾಗಲೀ. ಇಲ್ಲ. ನಾನೇ ಪಿ.ಎಲ್.ಡಿ, ಬ್ಯಾಂಕ್‌ಗೆ ಸಾಲಗಾರನಾಗಿದ್ದೇನೆ. ಇಷ್ಟೇ ನನಗೂ ಸಹಕಾರ ಕ್ಷೇತ್ರಕ್ಕೂ ಇರುವ ಸಂಬಂಧ.

ಕೃಷ್ಣರಾಜಪೇಟೆಯ ವಿಷಯವನ್ನು ನಾನು ಪುನರ್ ವಿಮರ್ಶೆ ಮಾಡುತ್ತೇನೆ. ಅದರಲ್ಲಿ ಹಣ ಇಲ್ಲದೇ ಹೋದರೆ ಷೇರ್ ಬಂಡವಾಳ ಇಲ್ಲದಿದ್ದರೆ ನಾವು ಮಾಡಿರತಕ್ಕದ್ದು ತಪ್ಪಾಗುತ್ತದೆ. ತಕ್ಷಣ ಆ ನಾಮಕರಣವನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ. ಆ ಒಂದು ನಾಮಕರಣವನ್ನು ಇಡುವುದಕ್ಕೆ ಬಿಡುವುದಿಲ್ಲ.

3-30 P.M.

SRI K. PUTTASWAMY.—Regarding some other federation, I have erred on the side of being generous You kindly search your heart and see whether what you have done is correct.

SRI K. H. RANGANATH.—I think the hon'ble member will take as offended if I say that on one or two occasions the member has approached me for some nominations or the other.

SRI K. PUTTASWAMY.—There is nothing wrong when you have powers of nomination under rule 29. Instead of approaching you for nomination I have approached you not to nominate certain persons.

SRI K. H. RANGANATH.—It is with the hon'ble member's permission I disclosed the information Madam Speaker, I want to give a second look. ಬೈಲಾದಲ್ಲಿರುವ ಪ್ರಕಾರ 29ನೇ ಸೆಕ್ಷನ್ ಪ್ರಕಾರ ನಾಮಕರಣ ಮಾಡ ತಕ್ಕದ್ದು 53 (ಎ) ಪ್ರಕಾರ ನಾಮಕರಣ ಮಾಡತಕ್ಕದ್ದು ಸರಿಯಾದ್ದಲ್ಲ. ಇಡೀ ಕಾನೂನನ್ನು ಪುನರ್‌ಪರಿಮರ್ಶೆ ಮಾಡುವುದಕ್ಕೋಸ್ಕರ ಒಂದು ಕಮಿಟಿಯನ್ನು ನಾವು ನೇಮಕ ಮಾಡಿದ್ದೇವೆ. ಶ್ರೀಮಾನ್ ರಂಗಯ್ಯನವರನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದೆವು. ಈಗ ಅವರು ಇಲ್ಲದೇ ಇರುವುದರಿಂದ ಮತ್ತೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ವಿಚಾರ ಮಾಡುತ್ತಿದ್ದೇವೆ. ಯೂನಿಯನ್ ಚೆನ್ನಾಗಿ ಕೆಲಸ ಮಾಡಬೇಕು, ಬೋರ್ಡ್ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ ಎಂದು ಹೇಳಿದ್ದಾರೆ. ಸಹಕಾರಿ ಕ್ಷೇತ್ರದಲ್ಲಿ ಮಾನ್ಯ ಸದಸ್ಯರ ಅಭಿಪ್ರಾಯ ಏನಿದೆ ಅದರ ಪ್ರಕಾರ ಕೆಲಸ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಇನ್ನು ಸಿಲ್ಕ್ ಬಗ್ಗೆ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದ್ದಾರೆ. 7½ ಕೋಟಿ ರೂಪಾಯಿಗಳು ನಷ್ಟವಾಗಿದೆ ಎಂದು ಈ ಸಭೆಯಲ್ಲಿ ಹೇಳಿದ್ದಾರೆ. ಇವೊತ್ತು ಪತ್ರಿಕೆಯಲ್ಲಿ ಕೂಡ 7½ ಕೋಟಿ ರೂಪಾಯಿಗಳ ನಷ್ಟವಾಗಿದೆ ಎಂದು ಹೇಳಿದ್ದಾರೆ. ಆದರೆ 7½ ಕೋಟಿ ರೂಪಾಯಿಗಳು ನಷ್ಟವಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮಂತ್ರಿಗಳು ಹೇಳಿದ್ದನ್ನು ಹೊರಗಡೆ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ನಷ್ಟವಾಗಿದೆ ಎಂಬ ಭೀತಿಗೆ ಆಧಾರವಿಲ್ಲ. ಇವೊತ್ತು ಫೆಡರೇಷನ್ ಫಿಲೇಚರ್‌ನಿಂದ 6 ಕೋಟಿ ರೂಪಾಯಿಗಳ ಬೆಲೆ ಬಾಳುವ ರೇಷ್ಮೆಯನ್ನು ಕೊಂಡು ಕೊಂಡಿದೆ. ನಿಗದಿ ಮಾಡಿದ ಬೆಲೆಗಿಂತ ಹೆಚ್ಚಿನ ಬೆಲೆಗೆ ರೇಷ್ಮೆಯನ್ನು ಮಾರಾಟ ಮಾಡಿದೆ ಎಂದು ಹೇಳುವುದು ಸರಿಯಲ್ಲ ಏನು ಕ್ರಯವನ್ನು ನಿಗದಿ ಮಾಡಿದ್ದಾರೆ ಆ ಕ್ರಯಕ್ಕೆ ಮಾರಾಟ ಮಾಡಿ ಆದರಲ್ಲಿ ಈ ಸಿಲ್ಕ್ ಮಾರ್ಕೆಟಿಂಗ್ ಫೆಡರೇಷನ್‌ನವರು ಕಮಿಷನ್ ಪಡೆದುಕೊಂಡಿದ್ದಾರೆ. ಆದ್ದರಿಂದ ಹೆಚ್ಚು ಬೆಲೆಗೆ ಮಾರಾಟ ಮಾಡಿದ್ದಾರೆ ಎಂದು ಹೇಳುವುದು ಸರಿಯಾದ್ದಲ್ಲ. ಫಿಲೇಚರ್‌ನವರು ಸಪ್ಲೈ ಮಾಡಿರತಕ್ಕ 6 ಕೋಟಿ ರೂಪಾಯಿಗಳ ಸಿಲ್ಕ್ ಮಾರಾಟ ಏನಾಗಿದೆ ಆ ಬಗ್ಗೆ ಕೊಡಬೇಕಾದಂತಹ 64 ಲಕ್ಷ ರೂಪಾಯಿಗಳ ಬಾಕಿಯನ್ನು ಫಿಲೇಚರ್‌ಗಳಿಗೆ ಪಾವತಿ ಮಾಡ ಬೇಕಾಗಿದೆ. ಇದರಲ್ಲಿ 20 ಲಕ್ಷ ರೂಪಾಯಿಗಳು ವರ್ತಕರಿಂದ ಫೆಡರೇಷನ್ನಿಗೆ ಬರಬೇಕಾಗಿದೆ. 40 ಲಕ್ಷ ರೂಪಾಯಿಗಳನ್ನು ಫೆಡರೇಷನ್ನಿನ ವ್ಯವಹಾರಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ. ಒಂದು ಕೋಟಿ ಚಿಲ್ಲರೇ ರೂಪಾಯಿಗಳು ಬೇರೆ ರಾಜ್ಯಗಳಲ್ಲಿ ವ್ಯಾಪಾರ ಮಾಡತಕ್ಕದ್ದರಲ್ಲಿ ನಿಂತಿದೆ. ಹೀಗೆ ಒಂದು ಕೋಟಿ ಚಿಲ್ಲರೆ ರೂಪಾಯಿಗಳು ಬಾಕಿ ಫೆಡರೇಷನ್ನಿಗೆ ಬರಬೇಕಾದುದರ ಬಗ್ಗೆ ವಸೂಲು ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಈ ದೃಷ್ಟಿಯಿಂದ ಸಿಲ್ಕ್ ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ದುರ್ವ್ಯಯವಾಗಿದೆ ಎಂದು ಹೇಳತಕ್ಕ ಅಪಾದನೆ ಸರಿಯಾದ್ದಲ್ಲ. ಶ್ರೀಮಾನ್ ಬೈರೇಗೌಡರು ರೇಷ್ಮೆ ಬೆಲೆ ಕುಸಿದು ಬಿದ್ದಿದೆ ಎಂದು ಹೇಳಿದರು. ಈಗ ಸರ್ಕಾರ ಆ ಸಿಲ್ಕ್ ಅನ್ನು ಖರೀದಿ ಮಾಡತಕ್ಕ ಕೆಲಸ ಮಾಡಿದೆ. ಆದ್ದರಿಂದ ಈ ಬಗ್ಗೆ ಕಳವಳ ಪಡ ಬೇಕಾಗಿಲ್ಲ.

ಇನ್ನೊಂದು ಮಾತನ್ನು ಬಹಳ ನೋವಿನಿಂದ ಹೇಳಬೇಕಾಗಿದೆ. ಮಾನ್ಯ ಸದಸ್ಯರು ಈ ಬೇಡಿಕೆಯ ಬಗ್ಗೆ ಕೆಲವರು ಟೀಕೆ ಮಾಡಿದ್ದಾರೆ. ಅವರಿಗೆ ಟೀಕೆ ಮಾಡುವುದಕ್ಕೆ ಅಧಿಕಾರ ಇದೆ. ಟೀಕೆ ಮಾಡಿದ್ದಾರೆ. ಆದರೆ ಅವರು ಆ ರೀತಿ ಟೀಕೆ ಮಾಡುವಾಗ ಟೀಕೆ ಮಾಡಿದಂತಹವರು ಬಳಸಿದ ಭಾಷೆ ಪತ್ರಿಕೆಯಲ್ಲಿ ಕೂಡ ಬಂದಿದೆ. ಅದನ್ನು ನಾನು ಪತ್ರಿಕೆಯಲ್ಲಿ ಓದಿದಾಗ ಮನಸ್ಸಿಗೆ ಸ್ವಲ್ಪ ನೋವಾಯಿತು. ಶ್ರೀಮಾನ್ ಬೈರೇಗೌಡರು ಈ ಮಾತನ್ನು ಹೇಳಿದ್ದಾರೆ. ಸೊಸೈಟಿಗಳವರು ಸಕ್ಕರೆ ಕಂಪನಿಗಳವರು ಸ್ಪಿನ್ನಿಂಗ್ ಮಿಲ್‌ಗಳವರು ಕಾರುಗಳಲ್ಲಿ ಹೋಗುತ್ತಾರೆ ಅವರು ಎಲ್ಲೆಲ್ಲಿ ಹೋಗುತ್ತಾರೆ ಎಂಬುದು ಗೊತ್ತಿದೆ. ಆದರೆ ಅದನ್ನು ಹಿಡಿದಿಲ್ಲ. ಆ ಕಾರುಗಳ ಬಗ್ಗೆ ಲೆಕ್ಕವನ್ನು ಇಡುವುದಕ್ಕಾಗಿ ಲಾಗ್ ಬುಕ್‌ಗಳನ್ನು ಇಡುವುದನ್ನು ವಿಚಾರ ಮಾಡುತ್ತೇವೆ. ಆದರೆ ಮಾತನಾಡುವಾಗ ಆ ಭಾಷೆಯನ್ನು ಬಳಸುವುದು ಸರಿಯಲ್ಲ. ಆ ಶಬ್ದ ಯಾವುದೋ ಕಾಲದಿಂದ ಬಂದದ್ದು. ಅದನ್ನು ಪತ್ರಿಕೆಗಳವರೂ ಕೂಡ ಬಳಸುವುದು ಬೇಡ. ಅದರಿಂದ ನೋವಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಸಾರ್ವಜನಿಕರ ಹಣವನ್ನು ದುರುಪಯೋಗ ಮಾಡಿದಾಗ ನಮಗೆ ನೋವಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ.—ಆದಷ್ಟು ಆ ಶಬ್ದವನ್ನು ಬಳಸುವುದನ್ನು ಈ ರಾಜ್ಯದಲ್ಲಿ ಕಡಿಮೆ ಮಾಡಿದರೆ ಒಳ್ಳೆಯದು ಎಂದು ಹೇಳಬಯಸುತ್ತೇನೆ.

ಶ್ರೀಮಾನ್ ದೇವೇಗೌಡರು ಮಾರ್ಕೆಟಿಂಗ್ ಫೆಡರೇಷನ್ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಪೆಸ್ಟಿಸೈಡ್ಸ್ 35 ಲಕ್ಷ ರೂಪಾಯಿಗಳದು ಲಾಸ್ ಆಗಿದೆ ಎಂದು ಹೇಳಿದ್ದಾರೆ. ಆದರೆ ಈ ಪೆಸ್ಟಿಸೈಡ್ಸ್ 25 ಲಕ್ಷ ರೂಪಾಯಿಗಳ ಮಾಲು ಸ್ಟಾಕ್ ಇದೆ ಎಂದು ನಾನು ಕೇಳಿದ್ದೇನೆ. ಈ ಬಗ್ಗೆ ಒಂದು ಕೋಟಿ ರೂಪಾಯಿಗಳ ವ್ಯವಹಾರ ಮಾಡಿದ್ದಾರೆ. ಈ ವಿಷಯದಲ್ಲಿ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನವರ ಸಲಹೆಯನ್ನು ತೆಗೆದುಕೊಂಡು ಈ ವ್ಯವಹಾರವನ್ನು ಮಾಡಲಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಚಾರ್ಜ್ ಏನೆಂದರೆ Contrary to the resolution of the Board. The President has placed orders and there by incurred a loss of Rs. 1½ lakhs.

ಶ್ರೀ ಕೆ. ಎಚ್. ರಂಗನಾಥ್.—ಅದನ್ನು ಮತ್ತೆ ಬೋರ್ಡ್ ರೆಕ್ಟಿಫೈ ಮಾಡಿಕೊಂಡಿದ್ದಾರೆ. ಈಗ ಇರುವ ವಿಚಾರವನ್ನು ನಾನು ಹೇಳುತ್ತೇನೆ. ಇದರಲ್ಲಿ ಏನು ಮಾಡಬಹುದು ಎಂಬುದನ್ನು ವಿಚಾರ ಮಾಡೋಣ 25 ಲಕ್ಷ ರೂಪಾಯಿಗಳನ್ನು 16ನೇ ಜುಲೈ 1974 ರಲ್ಲಿ ಮತ್ತು 2?ನೇ ಡಿಸೆಂಬರ್ 1974 ರಲ್ಲಿ ರೆಕ್ಟಿಫೈ ಮಾಡಿಕೊಂಡಿದ್ದಾರೆ. ಹಣ ಬಾಕಿ ಕೊಡದೆ ಇರುವ ಬಗ್ಗೆ ಕೂಡ ನಾವು ಕ್ರಮ ತೆಗೆದುಕೊಂಡಿದ್ದೇವೆ. ಯಾರೋ ಒಬ್ಬ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದಾರೆ, ಬಾಕಿಯವರನ್ನು ಮಾಡಲಿಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ಒಂದು ಸಬ್ ಕಮಿಟಿಯನ್ನು ಮಾಡಿ 4–5 ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ವಿಚಾರಣೆ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ. ಇಷ್ಟು ವಿಚಾರಗಳನ್ನು ಈ ಸಭೆಯ ಮುಂದಿಟ್ಟು ಈ ಮಾನ್ಯ ಸಭೆಗೆ ಬಹಳ ಮಟ್ಟಿಗೆ ಎಲ್ಲಾ ಟೀಕೆಗಳಿಗೂ ನಾನು ಉತ್ತರ ಕೊಟ್ಟಿದ್ದೇನೆ. ಯಾವುದಾದರೂ ವಿಚಾರವನ್ನು ನಾನು ಟಚ್ ಮಾಡದಿದ್ದರೆ ಅದನ್ನು ಗಮನದಲ್ಲಿಟ್ಟುಕೊಂಡು ಅದನ್ನು ಫಾಲೋಅಪ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇಷ್ಟು ಹೇಳಿ ಈ ಮಾನ್ಯ ಸಭೆ ಈ ಒಂದು ಬೇಡಿಕೆಗೆ ತಮ್ಮ ಒಪ್ಪಿಗೆಯನ್ನು ಕೊಡಬೇಕು ಎಂದು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri R. D. Kittur (Minister of State for Regulated Markets).—Madam Speaker, there is a separate Marketing Department now functioning in the State. Now, there are 106 main markets and 145 sub-markets functioning in the State. Through this channel we are doing trade of agricultural produce of about Rs. 430 to Rs. 440 crores per year. Also, there are Primary Grading Units functioning in the 32 Market Committees in the State. Government desires that almost all the 106 Market Committee should have such Primary

Grading Units in a very short time. There are some proposals to declare the present existing Cattle markets as sub-markets, and Government desires to locate all important Bazaars and shandies which are now functioning to be declared as sub-markets to facilitate easy trading even by the small agriculturists. Now we are implementing world Bank Project and selected 39 markets in the first phase. Sanction is also accorded to the 25 markets, which are now taking up developmental works and we hope to complete this project within the stipulated time.

Due to our efforts, we have secured from the Union Government Rs. 18 lakhs as grant-in-aid to develop Market Committees in the State, and we have selected 4 such Market Committees for developmental purposes to facilitate agriculturists. Last time, I had disclosed here to have a Market Committee Employees Services rules Our Chief Marketing Officer has sent proposals to the Karnataka Market Committee Services and early steps would be taken to constitute this. There is also one Board functioning in the State by name the Karnataka State Agricultural Marketing Board, and the functions of this Board are (a) general improvement of regulation of marketing (b) giving aid to the financially weak market Committees in the form of loans and grants, (c) promotion of grading and standardization of agricultural produce, (d) carrying on propaganda and publicity on matters relating to regulated marketing (e) imparting education in agricultural marketing and training the officers and staff, of market Committees, and (f) conducting research in agricultural marketing.

Now, I would like to reply to some of the points raised by hon. members, particularly Sriyuths T. M, Manjunath, K. Siddaiah, K. M. Rudrappa and Kulkarni. They have suggested some important steps to be taken in the regulated markets. I will examine these suggestions, find out suitable remedies and try to implement them. The hon. Leader of the Opposition has raised some queries about his own Taluk Holenarasipur. This Market Committee has got only 8 acres of land. It is the desire of the Government that this APMC should be developed in a proper way. We cannot develop this APMC with only 8 acres of land. Therefore, the Government desires to acquire more land for this purpose and accordingly acquisition proceedings are going on.

One important pointwas raised by the hon. member SriK. Puttaswamy regarding some amendments to be made in the Act so that the agriculturists and users of the Market Committees are benefited. I have already constituted a Committee of six members of the State Agricultural Marketing Board with a request to suggest

comprehensive amendments to the Karnataka Agricultural Marketing Producers' Act and to frame rules thereon. I will pass on the suggestions of the hon. member to the Committee, and after getting a report we will consider their suggestions and find out a solution to this problem to facilitate the agriculturists.

There are some cut motions by the hon. member Sri T. R. Shamanna. I have replied earlier mostly to his points. He is critical about the failure of Government in giving the necessary facilities to the Agricultaral Market at Yeshwantapur which is not correct. We have provided several amenities in this Yeshwantapur Market, such as roads, lights, water facilities, rest house, auction platforms, check-post, sanitary blocks, shops, fire fighting engine, grading equipment and so on. This Market is developing very fast and they have also constructed more than 67 godowns to facilitate traders and commission agents.

Hon. Member Sri C. Byre Gowda stated that the Chairman of APMC, Bangarpet, has claimed road mileage though he is not maintaining a Car. This matter is under examination under section 126, and when we get a report proper action will be taken.

With these few words, I thank the Chair, and request the House to pass the Demand pertaining to my Department.

ಶ್ರೀ ಟಿ. ಎಂ. ಮಂಜುನಾಥ್.—ನಾನು ಒಂದು ಉದಾಹರಣೆ ಹೇಳುತ್ತೇನೆ. ಏನೆಂದರೆ, ಕೋಕನಟ್ ಅಥವಾ ಕೊಪ್ಪರಿಗೆ ತುರುವೇಕೆರೆ ಚಿಕ್ಕನಾಯಕನಹಳ್ಳಿ ಮಾರ್ಕೆಟಿನಲ್ಲಿ ಸೆಸ್ ಕೊಟ್ಟಿರುತ್ತಾರೆ. ಅದನ್ನು ತಿಪಟೂರು ಮುಖಾಂತರ ತೆಗೆದುಕೊಂಡು ಹೋಗಬೇಕಾದರೆ ಮತ್ತೊಮ್ಮೆ ಸೆಸ್ ಕೊಡಬೇಕಾಗುತ್ತದೆ. ತುರುವೇಕೆರೆ, ಚಿಕ್ಕನಾಯಕನಹಳ್ಳಿಯಲ್ಲಿ ಟ್ರೈನ್ ಫೆಸಿಲಿಟಿ ಇಲ್ಲ. ಒಂದು ಕಮಾಡಿಟಿಗೆ ಒಂದು ಮಾರ್ಕೆಟಿನಲ್ಲಿ ಸೆಸ್ ಕೊಟ್ಟಿರುತ್ತೇವೆ. ಅದು ಅಲ್ಲಿ ಮಾರಾಟವಾಗದೆ ಬೇರೆ ಇನ್ನೊಂದು ಮಾರ್ಕೆಟಿಗೆ ಹೋದಾಗ ಅಲ್ಲಿ ಮತ್ತೊಮ್ಮೆ ಸೆಸ್ ಕೊಡಬೇಕಾಗುತ್ತದೆ, ಇದರಿಂದ ಬಹಳ ಜನ ತೊಂದರೆಗೆ ಒಳಗಾಗಿದ್ದಾರೆ ಆದುದರಿಂದ ಒಂದು ಮಾರ್ಕೆಟಿನಲ್ಲಿ ಸೆಸ್ ಕೊಟ್ಟಿರತಕ್ಕಂಥ ಪದಾರ್ಥವನ್ನು ಮತ್ತೊಂದು ಮಾರ್ಕೆಟಿನಲ್ಲಿ ತಂದಾಗ ಅಲ್ಲಿ ಸೆಸ್ ಕೊಡುವುದನ್ನು ಮಾಫಿ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

SRI R. D. KITTUR.—The same point has also been raised by the hon. member Sri K. Puttaswamy, and I will refer this matter to the Committee.

SRI H. D. DEVE GOWDA.—I referred to the acquisition of land by the Market Yard.

SRI R. D. KITTUR.—The concerned APMC has got only 8 acres of land under its possession. In order to develop this area we want more land.

SRI H. D. DEVE GOWDA.—You have acquired 2½ acres of wet land. They want to acquire another 20 acres near the Hemavathi South Channel area. In this connection I had written a letter. It is not right to go in for a costly land. About 22 farmers belonging to the

backward classes have been sent out of their land. That is why I had suggested a dry land which is near the town. That could be thought of. There is no need to acquire wet land.

SRI R. D. KITTUR —I shall examine the suggestion.

SRI H D. DEVE GOWDA.—You go to the spot and study the situation.

SRI B. B SAYANAK.—In Belgaum they have not exempted the cess on green chillies whereas in other areas this has been exempted.

SRI R. D. KITTUR.—There is no question of exemption, There is provision to collect the market cess. If the committee does not function well, then we will think of taking proper action.

ಶ್ರೀ ಕೆ. ಎಚ್. ರಂಗನಾಥ . ನಿನ್ನೆ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಪ್ರಸ್ತಾಪ ಮಾಡುವಾಗ ಎಸ್.ಎಲ್.ಡಿ. ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್‌ರವರು ನೇರವಾಗಿ ನನ್ನೊಡನೆ ಸಂಪರ್ಕ ಇಟ್ಟುಕೊಂಡಿದ್ದಾರೆ, ಅದಕ್ಕಾಗಿ ಬರುತ್ತಿದ್ದಾರೆಂದು ಹೇಳಿದರು. That is far from truth. He had come to me when I had called him. He is not in the habit of coming to the Minister. That is what I wanted to say.

SRI KAGODU THIMMAPPA.—What about his attitude towards the President.

SRI K. H. RANGANATH —I have not heard any complaint from the President against this gentleman.

SRI KAGODU THIMMAPPA —Because the Chairman is put in an embarrassing situation, naturally it is very difficult for him to approach the Minister and represent the matter. You must shift that gentleman from that place.

MADAM SPEAKER.—The question is :

'That respective sums not exceeding the amounts mentioned in the list of demands, be granted to Government to defray the charges which will come in course of payment during the financial year ending 31st day of March 1978 in respect of demand Nos, 37, 1 and 38".

The motion was adopted and the sums are granted

As ordered by the Chair the motion of Demands for Grant adopted by the House are reproduced below :—

Minister for Industries and Parliamentary Affairs:—

DEMAND No. 1.—STATE LEGISLATURE AND ELECTIONS

"That a sum not exceeding Rs. 3,02,70,000 inclusive of the sum granted 'on account' be granted to the Government to

defray the charges which will come in course of payment during the financial year ending 31st day of March 1978 in respect of "State Legislature and Elections."

DEMAND No. 37—CO-OPERATION (EXCLUDING REGULATED MARKETS)

"That a sum not exceeding Rs. 15,91,01,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of "Co-operation)Excluding Regulated Markets)."

DEMAND No. 38.—REGULATED MARKETS

"That a sum not exceeding Rs. 1,33,82,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of "Regulated Markets".

Demand Nos. 23 and 24

SRI H. M. CHANNABASAPPA (Minister for Public Health).—Madam, on the recommendation of the Governor, I beg to move—

"That a sum not exceeding Rs 39,01,09,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 23 "Medical Services and Family Planning."

"That a sum not exceeding Rs 6 44 40,000 inclusive of the sum granted 'on account' be granted to the government to defray the charges which will come in course of payment during the financial year ending 31st day of March 1978 in respect of Demand No. 24 "Public Health and Sanitation".

MADAM SPEAKER.—Motion moved-

"That a sum not exceeding Rs. 39,01,09,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 23 "Medical Services and Family Planning."

The other Demand is before the House for discussion."